
# ಅಪರಂಜಿ

ತಿಳಿನಗೆಯ ಕಾರಂಜಿ

ಆಗಸ್ಟ್ 2018

**ಸುದ್ದಿ:**

**ತುಂಬಿದ ಜಲಾಶಯಗಳು... ಉಕ್ಕಿ ಹರಿಯುತ್ತಿರುವ ನದಿಗಳು...**




ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್


**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ




# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 35**

**ಸಂಚಿಕೆ – 11**

**ಆಗಸ್ಟ್ – 2018**


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಆರ್.ಕೆ. ಲಕ್ಷ್ಮಣ್ | ಶಿವಕುಮಾರ್ | 3 |
| ಭಾಗಮ್ಮನ ಗಾದೆ ಪ್ರಹಾರ | ಗಾಯತ್ರಿ ಮೂರ್ತಿ | 7 |
| ಬಿ.ಎಂ.ಟಿ.ಸಿ. ಬಸ್ಸಿನಲ್ಲಿ.... | ಸಂಕೇತ ಅಶೋಕ ಪೂಜಾರ | 11 |
| ವರ ಬೇಕಾಗಿದೆ! | ಸಹನಾ ಪ್ರಸಾದ್ | 17 |
| ತುಂತುರು | ದಂನಳ | 19 |
| ಕಾಮನ್ ರೂಮ್ ಕಹಾನಿ | ಗಣೇಶ ಹೆಗ್ಗಡೆ | 22 |
| ಅವರವರ ಜಾಯಮಾನ | ಶಾಂತರಾಜ ಐತಾಳ | 27 |
| ಸಂಜೆಹೊತ್ತಿಗೆ ಸೀರೆ.... | ಎಚ್.ಆರ್. ಹನುಮಂತ ರಾವ್ | 29 |
| ಸ್ವಚ್ಛಭಾರತ ಅಭಿನಯ | ಶರತ್ ಕಲ್ಕೋಡ್ | 33 |
| ಬಗೆ ಬಗೆ ಜಗಳ | ಸುಕೇಶವ | 35 |
| ಯಕ್ಷಗಾನದ ರಣವೀಳ್ಯ | ಅನಿತಾ ನರೇಶ್ ಮಂಚಿ | 36 |


**ಮುಖಪುಟ ವ್ಯಂಗ್ಯಚಿತ್ರ – ಜಿ.ಎಸ್. ನಾಗನಾಥ್**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259



ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com



*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



'ಕಾಂಗ್ರೆಸ್ ಆತ್ಮಾವಲೋಕನ ಸಭೆ; ಗೆದ್ದವರಷ್ಟೇ

ಅಲ್ಲ, ಸೋಲುಂಡವರ ಸಹಕಾರವೂ ಅಗತ್ಯ'

**ಜಟ್ಟಿ ಬಿದ್ದರೂ....!! ಹೇಳಿಕೆ**

★★★

ರಾಜಕೀಯದಲ್ಲಿ ಶಾಶ್ವತ ಮಿತ್ರ, ಶತ್ರು ಎಂದಿಲ್ಲ – ಪತ್ರಿಕೆ

**ಇದು ನಮಗೆ ಎಂದೋ ಮನದಟ್ಟಾಗಿದೆ!!**

★★★

ಬಡ್ತಿಯಲ್ಲಿ 'ಅರಣ್ಯ'ನ್ಯಾಯ – ಶೀರ್ಷಿಕೆ

**ನಿಯಮಗಳು ವಾಯುದೇವನಿಗೆ ಸಮರ್ಪಿಸಿದಂತಿದೆ!!**

★★★

ಹೊಸ ಶಾಸಕರಿಗೆ ಬ್ರೀಫ್‌ಕೇಸ್‌ಗಳನ್ನು

ಉಡುಗೊರೆಯಾಗಿ ಕೊಡುತ್ತಾರಂತೆ!!

ಅವು ಖಾಲಿಯಾಗಿರುತ್ತವೆ ಎಂದು ಖಚಿತವಂತೆ!!

★★★

ತಿರುಪತಿ; ಆರುದಿನ ಪ್ರವೇಶ ನಿಷೇಧ – ಪತ್ರಿಕೆ

**ಬಾಲಾಜಿ ರಜಾದಿನ ಹೇಗೆ ಕಳೆಯುತ್ತಾರೋ!!**

★★★

ಎರಡೇ ಗಂಟೆಯಲ್ಲಿ ಅಧಿಕಾರ ತ್ಯಜಿಸಲು ಸಿದ್ಧ

– ಮಾನ್ಯ ಮುಖ್ಯಮಂತ್ರಿಗಳು

**ಅದಕ್ಕ ಸಿದ್ಧತೆ ಏಕೆ ಬೇಕು?**

★★★

ನಾಲ್ಕು ನೂರು ಮೀಟರ್ ಸ್ಪರ್ಧೆಯಲ್ಲಿ

'ಸೀಮೋ' ಲಂಘನ ಮಾಡಿದ ದಾಸ್ ಅವರಿಗೆ

**ಅಪರಂಜಿಯ ಶುಭಾಷಯಗಳು**

# ಆರ್.ಕೆ. ಲಕ್ಷ್ಮಣ್

**- ಶಿವಕುಮಾರ್**




ರಾಸಿಪುರಮ್ ಕೃಷ್ಣಸ್ವಾಮಿ ಅಯ್ಯರ್ ಲಕ್ಷ್ಮಣ್ ನಮ್ಮ ನಾಡಿನ ಅತ್ಯಂತ ಪ್ರತಿಭಾವಂತ ವ್ಯಂಗ್ಯಚಿತ್ರಕಾರರಲ್ಲಿ ಒಬ್ಬರೆಂದು ಧಾರಾಳವಾಗಿ ಹೇಳಬಹುದು. ರಾ.ಶಿಯವರು ಕಸ್ತೂರಿಯವರೊಂದಿಗೆ ಜೊತೆಗೂಡಿ 1942ರಲ್ಲಿ ಕೊರವಂಜಿಯನ್ನು ಹೊರತಂದಾಗ ಯುವಕ ಲಕ್ಷ್ಮಣ್‌ನ ಹೆಸರು ಮುಖಪುಟದಲ್ಲೇ ರಾರಾಜಿಸುತ್ತಿತ್ತು. ಕೈಯಲ್ಲಿ ಬೊಂಬೆಯೊಂದನ್ನು ಇಟ್ಟುಕೊಂಡು ಕಣಿ ಹೇಳಲು ಸಿದ್ಧವಾಗಿದ್ದ ಕೊರವಂಜಿಯ ಚಿತ್ರವನ್ನು ರಚಿಸಿದ್ದು ಲಕ್ಷ್ಮಣ್. ಇದರೊಂದಿಗೆ ಮೊದಲ ಹಲವು ವರ್ಷಗಳಲ್ಲಿ ಪ್ರತಿ ಸಂಚಿಕೆಯಲ್ಲೂ ಆರ್.ಕೆ. ಲಕ್ಷ್ಮಣ್‌ರವರ ವ್ಯಂಗ್ಯಚಿತ್ರಗಳು ಕೊರವಂಜಿ ಓದುಗರನ್ನು ರಂಜಿಸುತ್ತಿದ್ದವು. ಆ ದಿನಗಳಲ್ಲಿ ಲಕ್ಷ್ಮಣ್ ಕಸ್ತೂರಿಯವರ ವಿದ್ಯಾರ್ಥಿ. ಚಿಕ್ಕ ವಯಸ್ಸಿನಿಂದಲೇ ಲಕ್ಷ್ಮಣ್‌ಗೆ ವ್ಯಂಗ್ಯಚಿತ್ರ ರಚನಾ ಕಲೆ ಒಲಿದು ಬಂದಿತ್ತು. ಇಂತಹ ಪ್ರತಿಭಾವಂತ ಕಲೆಗಾರ ಕೊರವಂಜಿಯ ಪ್ರಾರಂಭದ ವರ್ಷಗಳಲ್ಲಿ ಆ ಸಂಚಿಕೆಯೊಂದಿಗೆ ಕೈಜೋಡಿಸಿ ಅತ್ಯಮೂಲ್ಯ ವ್ಯಂಗ್ಯಚಿತ್ರಗಳನ್ನು ರಚಿಸಿದ್ದು ನಿಜಕ್ಕೂ ಸಂತಸದ ಸಂಗತಿ.

ಕೊರವಂಜಿಯ ದಿನಗಳ ನಂತರ ಲಕ್ಷ್ಮಣ್ ಮುಂಬಯಿಗೆ ತೆರಳಿ ತಮ್ಮ ವ್ಯಂಗ್ಯಚಿತ್ರ ರಚನಾ ವೃತ್ತಿಯನ್ನು ಕೈಗೊಂಡರು. ಫ್ರೀಪ್ರೆಸ್ ಜರ್ನಲ್‌ನಲ್ಲಿ ಮೊದಲು ಕೆಲಸಕ್ಕೆ ಸೇರಿ ಅನಂತರ 1951ರಲ್ಲಿ ಲಕ್ಷ್ಮಣ್ ಟೈಂಮ್ಸ್ ಆಫ್ ಇಂಡಿಯಾದಲ್ಲಿ ವೃತ್ತಿನಿರತರಾದರು ಅಂದಿನಿಂದ ಟೇಂಮ್ಸ್ ಅಫ್ ಇಂಡಿಯಾದಲ್ಲಿ ಪ್ರತಿದಿನ ಲಕ್ಷ್ಮಣ್ ಸೃಷ್ಟಿಸಿದ ಕಾಮನ್ ಮ್ಯಾನ್ 'ಯು ಸೆಡ್ ಇಟ್' ಎಂಬ ಶೀರ್ಷಿಕೆಯಡಿ ಪದಾರ್ಪಣ ಮಾಡಿದ್ದು ಚರಿತ್ರಾರ್ಹ ಘಟನೆ.

ಇಂಗ್ಲೀಷ್ ಪತ್ರಿಕೆಗಳಾದ ಸ್ಟ್ರಾಂಡ್,ಪಂಚ್ ಮತ್ತು ಬೈಸ್ಟ್ಯಾಂಡರ್ ಮುಂತಾದ ಪತ್ರಿಕೆಗಳಲ್ಲಿನ ವ್ಯಂಗ್ಯ ಚಿತ್ರಗಳು ಲಕ್ಷ್ಮಣ್ ಮೇಲೆ ಬಹುವಾಗಿ ಪ್ರಭಾವ ಬೀರಿದ್ದವು. ಬ್ರಿಟಿಷ್ ವ್ಯಂಗ್ಯಚಿತ್ರಕಾರ ಡೇವಿಡ್ ಲೋ ತಮ್ಮ ಆರಾಧ್ಯ ಕಲೆಗಾರ ಎಂದು ಸ್ವತಃ ಲಕ್ಷ್ಮಣ್ ಅವರೇ ಹೇಳಿದ್ದಾರೆ. ಚಿತ್ರರಚನೆ ಅವರಿಗೆ ಎಷ್ಟು ಸ್ವಾಭಾವಿಕವಾಗಿತ್ತೆಂದರೆ ಕಿಟಕಿ ಆಚೆಗಿನ ಗಿಡಮರಗಳು, ಸೂರುಗಳ ಮೇಲೆ ಕುಳಿತಿದ್ದ ಕಾಗೆಗಳು ಇವೆಲ್ಲಾ ಅವರ ಚಿತ್ರಕಲೆಯ ಅಭ್ಯಾಸಕ್ಕೆ ಗ್ರಾಸವಾಗುತ್ತಿದ್ದವು.

1973ರಲ್ಲಿ ಭಾರತ ಸರ್ಕಾರದಿಂದ ಲಕ್ಷ್ಮಣ್‌ಗೆ ಪದ್ಮಭೂಷಣ್ ಮತ್ತೆ 2005ರಲ್ಲಿ ಪದ್ಮವಿಭೂಷಣ್ ಪ್ರಶಸ್ತಿಗಳು ಲಭಿಸಿದವು. 1984ರಲ್ಲಿ ರಮೋನ್ ಮ್ಯಾಗ್ಸೇಸೇ ಸಂಸ್ಥೆ ಅವರಿಗೆ ಸಂವಹನಕಲೆಗಳಲ್ಲಿ ಸೃಜನಶೀಲತೆ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಸಿ ಎನ್ ಎನ್ ಐಬಿನ್18 ಟಿವಿ ಛಾನೆಲ್ಲಿನವರು ಲಕ್ಷ್ಮಣ್‌ಗೆ ಜನವರಿ 2008ರಲ್ಲಿ ಲೈಫ್‌ಟೈಮ್ ಅಚೀವ್‌ಮೆಂಟ್ ಅವಾರ್ಡ್ ನೀಡಿ ಸನ್ಮಾನಿಸಿದರು. ತೊಂಭತ್ತನಾಲ್ಕು ವರ್ಷಗಳ ಕಾಲ ಸಾರ್ಥಕ ಜೀವನವನ್ನು ನಡೆಸಿ ಲಕ್ಷ್ಮಣ್ 2005ರಲ್ಲಿ ವಿಧಿವಶರಾದರು.



"ನಾನು ಹೇಳಿದಹಾಗೆ ಕಿಟಕಿಗಳನ್ನೆಲ್ಲಾ ತೆರೆದಿಟ್ಟು ಮಲಗಿಕೊಂಡೆಯಾ ನೆನ್ನೆ ರಾತ್ರಿ?"


"ಹೂಂ"

"ಹಾಗಾದರೆ ಈಗ ಆ ತಲೆಯನೋವು ಮಾಯವಾಗಿರಬೇಕಲ್ಲಾ"


"ಆಗಿದೆ ಸಾರ್; ತಲೆಯನೋವಿನ ಜೊತೆಗೆ ನನ್ನ ಕನ್ನಡಕ, ಗಡಿಯಾರ, ಪರ್ಸು ಎಲ್ಲಾ ಮಾಯವಾಗಿದೆ"




ಇದು ನನ್ನ ಮನೆ. ಅವನು ಬಾಡಿಗೆಗಿದ್ದಾನೆ ಅಷ್ಟೇ!




ಒಂದು ಬಿಡಿ ಕಾಸೂ ಇಲ್ಲವಲ್ಲೋ! ನೀನೇ ನೋಡು! ಇರುವುದೆಲ್ಲ ಬರೀ ಬೆಳ್ಳಿ – ನಿಕ್ಕಲ್ಲು!




ಇವನೇ ನಮಗೆ ಬೇಕಾದ ಆಸಾಮಿ! ಇವನು ಆಹಾರ, ನೀರು, ಬೆಳಕು, ಗಾಳಿ
ಏನೂ ಇಲ್ಲದೇ ಬದುಕಿರಬಲ್ಲ!




ಹೊಸ್ದಾಗಿ ಅಕ್ಸರ ಕಲ್ತೌನು ಅಂತ ಇವನನ್ನ ಕೇಳಿದರೆ, ಇಪ್ಪತ್ತೆರಡು ಗಂಟೆಗೆ ಬೆಂಗ್ಳೂರು ರೈಲು ಅಂತಾನೆ. ಪೆದ್ದ! ಅನ್ನೆರಡರ ಮೇಲೆ ಗಂಟೇನೆ ಬಡಿಯೋಕಿಲ್ಲವಲ್ಲಾ ಬೆಪ್ಪೆ!



# ಭಾಗಮ್ಮನ ಗಾದೆ ಪ್ರಹಾರ

● ಗಾಯತ್ರಿ ಮೂರ್ತಿ

**ಭಾಗಮ್ಮನ ಬೊಂಬಾಯಿ ಬಾಯಿ ಬಂದ್ ಆಗಿದ್ದು ಹೇಗೆ?**

ಭಾಗಮ್ಮನ ಬಾಯಿ ಬೊಂಬಾಯಿ ಎಂದು ಈಗಾಗಲೇ ಜಗಜ್ಜಾಹೀರಾಗಿದೆ. ಅವರನ್ನು ದೂರದಲ್ಲಿ ಕಂಡರೆ ಸಾಕು ಪರಿಚಯಸ್ಥರು ತಲೆ ಮರೆಸಿಕೊಳ್ಳುತ್ತಾರೆ. ಅಂತಹ ಭಾಗಮ್ಮನಿಗೆ ಇದ್ದಕ್ಕಿದ್ದಂತೆ ಗಾದೆಗಳ ಬಗ್ಗೆ ವಿಪರೀತ ಮೋಹ ಬೆಳೆಯಿತು. ಅದರಿಂದಾಗಿ ಅವರ ಕೈಗೆ ಸಿಕ್ಕವರ ಫಜೀತಿ ದೇವರೇ ಗತಿ ಎಂಬಂತಾಯಿತು. ಭಾಗಮ್ಮ ಗಾದೆಗಳ ಪುಸ್ತಕ ತಂದು ಅನೇಕ ಗಾದೆಗಳನ್ನು ಉರು ಹಾಕಿ ಕಲಿತಿದ್ದೇನೋ ನಿಜವೇ. ಆದರೆ ಯಾವ ಗಾದೆ ಯಾವ ಸಂದರ್ಭಕ್ಕೆ ಬಳಸಬೇಕೆಂಬ ವಿವೇಕ್ಷಣೆಯಿಲ್ಲದೆ ಆಭಾಸವಾಗುತ್ತಿದ್ದುದೇ ಹೆಚ್ಚು. ಅದ್ಹೇಗೆ ಅಂತೀರಾ?

ಒಮ್ಮೆ ಭಾಗಮ್ಮನ ತಂಗಿ ಭಾರತಿ ಗೌರಿ ಹಬ್ಬಕ್ಕೆ ಅವರಿಗೊಂದು ಸೀರೆ ತಂದು ಬಾಗಿನದಲ್ಲಿ ಹಾಕಿ ಕೊಟ್ಟಳು. ತಂಗಿ ಸೀರೆ ಕೊಟ್ಟ ಸಂಭ್ರಮದಲ್ಲಿ ಭಾಗಮ್ಮ, 'ಏನೇ ಭಾರತಿ, ತನಗಿಲ್ಲದ ದೇವರು ತಮ್ಮಡಿಗೆ ವರ ಕೊಟ್ಟಾಂತ, ನೀನ್ಯಾಕೆ ನನಗೆ ಸೀರೆ ತಂದೆ?' ಎಂದು ಕೇಳಿದಾಗ ಭಾರತಿ ಮುಖ ಚಿಕ್ಕದು ಮಾಡಿಕೊಂಡು, 'ಅಕ್ಕ, ನಾವು ಬಡವರು ನಿಜ. ಅದೇನೋ ನಿನಗೆ ಸೀರೆ ಕೊಡ್ಬೇಕೂನ್ನಿಸ್ತು, ಅದಕ್ಕೇ ತಂದೆ. ನೀನು ಹೀಗನ್ನೋದಾ? ನನಗೆ ತುಂಬಾ ಬೇಜಾರಾಯ್ತು,' ಎಂದು ಕಣ್ಣಲ್ಲಿ ನೀರು ತುಂಬಿ ಹೇಳಿದಳು.

'ಅದು ಹಾಗಲ್ವೇ, ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವೂಂತಾರಲ್ಲ, ಹಾಗೆ ನಿನ್ನ ಹತ್ರಾನೇ ಒಳ್ಳೆಯ ಸೀರೆಗಳಿಲ್ಲ. ಹಾಗಿರೋವಾಗ ನನಗ್ಯಾಕೆ ಸೀರೇಂತ ಹೇಳಿದೆ ಅಷ್ಟೆ. ಅದೂ ಅಲ್ದೆ, ನೀನು ಎಂಜಲು ಕೈಲಿ ಕಾಗೆನೂ ಓಡಿಸಲ್ಲಾಂತರಲ್ಲಾ, ಹಾಗಿದ್ದೋಳು, ಇದೇನು ಇದ್ದಕ್ಕಿದ್ದ ಹಾಗೆ' ಎಂದು ತಮ್ಮ ಗಾದೆಗಳ ವಿಶೇಷ ಜ್ಞಾನವನ್ನು ಪಟಪಟಾಂತ ಉದುರಿಸಿದಾಗ ಗೌರಿ ಕೋಪ ಮಾಡಿಕೊಂಡು ಹೋದವಳು ಈವರೆಗೆ ಅವರ ಮನೆ ಕಡೆ ತಲೆ ಹಾಕಿಲ್ಲ. ಅಕ್ಕನ ಮನೆಗೆ ಹೋದ್ರೆ ಇನ್ಯಾವ ಗಾದೆಗಳ ಮೂಲಕ ತನ್ನ ಮಾನ ಮರ್ಯಾದೆ ಕಳೀತಾಳೋಂತ ಅವಳಿಗೆ ಹೆದರಿಕೆಯಂತೆ!

***

ಭಾಗಮ್ಮನ ಪಕ್ಕದ ಮನೆ ಪಂಕಜಮ್ಮನಿಗೆ ಮೂವರು ಹೆಣ್ಣು ಮಕ್ಕಳು. ಒಂದು ದಿನ ರಾತ್ರಿಯಾದರೂ ಅವರ ದೊಡ್ಡ ಮಗಳು ಪಲ್ಲವಿ ಕೆಲಸಕ್ಕೆ ಹೋದವಳು ಮನೆಗೆ ಬಂದಿರಲಿಲ್ಲ. ಅವರ ಪರದಾಟ ಹೇಳ ತೀರದು. ರಾತ್ರಿ ಹತ್ತು ಗಂಟೆಗೆ ಅವಳ ಫೋನ್ ಬಂತು. ನಡುಗುವ ಕೈಗಳಿಂದ ಫೋನ್ ತೆಗೆದುಕೊಂಡ ಅವರಮ್ಮ 'ಏನಾಯ್ತೇ? ಎಲ್ಲಿದೀಯಾ? ಯಾಕಿನ್ನೂ ಮನೆಗೆ ಬಂದಿಲ್ಲ?' ಎಂದು ನಡುಗುದನಿಯಲ್ಲಿ ಕೇಳಿದರೆ, ಅವಳು ಸಂತಸದ ದನಿಯಲ್ಲಿ, 'ಅಮ್ಮ, ಹೆದರಬೇಡ. ನನಗೇನೂ ಆಗಿಲ್ಲ. ಇವತ್ತು ಸಂಜೆ

ದೇವಸ್ಥಾನದಲ್ಲಿ ನಾನು, ಶ್ಯಾಮ್‌ನನ್ನು ಮದುವೆ ಆಗಿದೀನಿ. ನಾನಿನ್ನು ಮನೆಗೆ ಬರಲ್ಲ,' ಎಂದು ದೊಡ್ಡ ಸಿಡಿಗುಂಡನ್ನೇ ಸಿಡಿಸಿದಳು ಪಲ್ಲವಿ. ಪಂಕಜಮ್ಮ ಮಗಳು ಮರ್ಯಾದೆ ಕಳೆದ್ಲೂಂತ ತಲೆ ಮೇಲೆ ಕೈಹೊತ್ತು ಕುಳಿತರು.

ಇತ್ತ, ಪಕ್ಕದ ಮನೆ ಪಲ್ಲವಿ ಮನೆಗೆ ಬಂದಿಲ್ಲಾನ್ನೋ ಸಂಗತಿ ಭಾಗಮ್ಮನ ಕಿವಿಗೆ ಬಿತ್ತು. ಪಲ್ಲವಿ ಯಾವನ ಹಿಂದೆ ಓಡಿ ಹೋದ್ಲೋಂತ ಯೋಚಿಸೋದ್ರಲ್ಲೇ ಅವರಿಗೆ ರಾತ್ರಿ ಇಡೀ ನಿದ್ದೆ ಬರ್ಲಿಲ್ಲ. ಮರುದಿನ ಬೆಳಿಗ್ಗೆ ಕಾಫಿ ಕುಡಿದಿದ್ದೇ, ಪಕ್ಕದ ಮನೆಗೆ ಸಕ್ಕರೆ ಕೇಳೊ ನೆಪದಲ್ಲಿ ಹೋದರು. ವಿಷಯ ತಿಳಿಯಿತು. ಸರಿ, ಮುತ್ತಿನಂತಹ ಗಾದೆ ಭಾಗಮ್ಮನ ಬಾಯಿಂದ ಪಟಕ್ಕನೆ ಉದುರಿತು, 'ಅವಳಿಗೂ ವಯಸ್ಸು ಮೂವತ್ತಾಗಿರ್ಬೇಕಲ್ವೇ? ಹಿಟ್ಟು ಹಳಸಿತ್ತು, ನಾಯಿ ಹಸಿದಿತ್ತು ಅಂತ ಗಾದೆ ಹೇಳ್ತಾರಲ್ಲ, ಹಾಗಾಯ್ತು ಸಮಾಚಾರಾನ್ನಿ,' ಎಂದಾಗ ಮೊದಲೇ ಮನಸ್ಸಿಗೆ ಬೇಸರವಾಗಿ ಕುಗ್ಗಿ ಹೋಗಿದ್ದ ಪಂಕಜಮ್ಮನ ಗತಿ ಏನಾಗಿರ್ಬೇಡ!

ಅವರ ಮಾತು ಕೇಳಿಸಿಕೊಂಡ ಎರಡನೆಯ ಮಗಳು ಪ್ರಣತಿ, 'ರ್ರೀ ಭಾಗಮ್ಮ, ಅವಳಿಗೇನೂ ಆಗಿಲ್ಲ. ನಮ್ಮ ಮನೆಯಲ್ಲಿ ಅವಳಿಷ್ಟ ಪಟ್ಟಿದ್ದ ಹುಡುಗನ್ನ ಮದುವೆ ಆಗೋಕೆ ಒಪ್ಲಿಲ್ಲ. ಇಬ್ಬರೂ ಒಬ್ಬರನ್ನೊಬ್ಬರು ಇಷ್ಟ ಪಟ್ರು, ಮದುವೆಯಾದ್ರು. ಅವಳು ಹಾಯಾಗಿರ್ತಾಳೆ ಬಿಡಿ. ನೀವು ನಮ್ಮ ತಂಟೆಗೆ ಬರ್ಬೇಡಿ,' ಎಂದು ಖಡಾಖಂಡಿತವಾಗಿ ಹೇಳಿದಾಗ, 'ನೋಡಿ ಪಂಕಜಮ್ಮ, ಇವಳು ಈಗ್ಲೇ ಹೇಗಾಡ್ತಿದಾಳೆ. ದೊಡ್ಡವರು ಅನ್ನೋ ಮರ್ಯಾದೇನೆ ಇಲ್ಲ. ಅದೇನೋ ಅಂತಾರಲ್ಲ, ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ ಅಂತ ಕೇಳಿದೀರಾ ತಾನೇ. ಈಗಾಗ್ಲೇ ಯಾವನ ಹಿಂದೆ ಓಡಿ ಹೋಗೋಕೆ ಸಿದ್ಧತೆ ಮಾಡ್ಕೊಂಡಿದೀಯೆ ಹುಡುಗಿ?' ಎಂದು ನಂಜು ತುಂಬಿದ ದನಿಯಲ್ಲಿ ಹೇಳಿದರು.

ಪಂಕಜಮ್ಮ ಅಳತೊಡಗಿದರು. 'ಯಾಕಳ್ತೀರ ಸುಮ್ನಿರಿ. ನಿಮಗೂ ಬಡತನ. ಪಲ್ಲವಿಗೆ ಮದುವೆ ಮಾಡೋಕೆ ನೀವು ತಾನೇ ಹಣ ಎಲ್ಲಿಂದ ತರ್ತಿದ್ರಿ? ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಅದೇ ಅನ್ನೋ ಹಾಗೆ ಆಯ್ತು ನಿಮ್ಮ ಕತೆ,' ಎಂದು ಭಾಗಮ್ಮ ಮತ್ತೆ ಹೇಳಿದಾಗ ಪ್ರಣತಿ,' ರೀ ಭಾಗಮ್ಮ, ಬಾಯಿಗೆ ಬಂದ ಹಾಗೆ ಮಾತಾಡಿ, ಮೊದ್ಲೇ ಅಳ್ತಿರೋ ನಮ್ಮಮ್ಮನಿಗೆ ಮತ್ತಷ್ಟು ಬೇಜಾರು ಮಾಡ್ಬೇಡಿ. ಮೊದಲು ಸುಮ್ಮನೆ ಇಲ್ಲಿಂದ ಜಾಗ ಖಾಲಿ ಮಾಡಿ' ಎಂದು ಬೆದರಿಕೆಯ ದನಿಯಲ್ಲಿ ನುಡಿದಳು.

'ಹೋಗ್ತೀನೇsss, ಆದರೆ ನೀನ್ಯಾಕೆ, ಇದ್ದಿದ್ದ ಇದ್ದಾಗೆ ಹೇಳಿದ್ರೆ ಎದ್ದು ಬಂದು ಎದೆಗೊದ್ರು' ಅಂತಾರಲ್ಲ, ಹಾಗಾಡ್ತೀಯ?' ಎಂದು ಮತ್ತೆ ಗಾದೆ ಪ್ರಹಾರ ನಡೆಸಿದರು. ಅವರ ಈ ಗಾದೆ ಪ್ರಹಾರಕ್ಕೆ ತತ್ತರಿಸಿದ ಪಂಕಜಮ್ಮ ಮತ್ತೆ ಬಿಕ್ಕಿ ಬಿಕ್ಕಿ ಅಳತೊಡಗಿದರು.

'ಭಾಗಮ್ಮನೋರೆ, ಇನ್ನು ಮತ್ತೆ ನಿಮ್ಮ ಗಾದೆ ಜ್ಞಾನ ಪ್ರದರ್ಶಿಸಕ್ಕೆ ಬಂದ್ರೆ ನಾನು ಸುಮ್ಮನಿರಲ್ಲ. ಮೊದಲು ಎದ್ದು ಹೋಗ್ರೀ, ಎದ್ದು ಹೋಗಿ ಮೊದಲು," ಎಂದು ಪ್ರಣತಿ ಅವರ ಬಳಿಗೆ ಬಂದಾಗ ಭಾಗಮ್ಮ, 'ಅಯ್ಯೋ, ನೋಡಿ ನಿಮ್ಮ ಮಗಳು ಹೇಗಾಡ್ತಾಳೆ. ಇಷ್ಟಕ್ಕೂ ನಾನು ಅನ್ನಬಾರದ್ದೇನಂದೆ?

ಏನೋ, ಅಂತೂ ಇಂತೂ ಕುಂತಿ ಮಕ್ಕಿಗೆ ರಾಜ್ಯವಿಲ್ಲ ಅನ್ನೋ ಹಾಗೆ ನನಗೆ ಸಕ್ಕರೇನೂ ಸಿಗ್ಲಿಲ್ಲ, ನಿಮ್ಮನೆ ಮದುವೆ ಊಟವೂ ಲಭ್ಯ ಇಲ್ಲ ಬಿಡಿ. ಬಂದದಾರೀಗೆ ಸುಂಕವಿಲ್ಲಾನ್ನೋ ಹಾಗೆ, ನಾನಿನ್ನು ಬರ್ತೀನಿ,' ಎಂದು ಭಾಗಮ್ಮ ಇಂಗು ತಿಂದ ಮಂಗನ ಹಾಗೆ ಮುಖ ಮಾಡಿಕೊಂಡು ಪಂಕಜಮ್ಮನ ಎರಡನೇ ಮಗಳತ್ತ ದುರುಗುಟ್ಟುತ್ತಾ ನೋಡಿ ತಮ್ಮ ಮನೆಗೆ ಹೋದರು.

ಆಮೇಲೇನಾಯ್ತೂಂತೀರಿ?

ಒಂದು ದಿನ ಪಿಯುಸಿ ಓದುತ್ತಿದ್ದ ಅವರ ಮಗಳು ಶ್ರೀಲಕ್ಷ್ಮಿ ಕಾಲೇಜಿನಲ್ಲಿ ಎಜುಕೇಶನ್ ಟೂರ್ ಅಂತ ಮೂರು ದಿನಗಳು ಹೋದವಳು ಮನೆಗೆ ಬರಲಿಲ್ಲ. ಮೂರು ದಿನಗಳೂ ಒಂದು ಫೋನ್ ಸಹ ಇಲ್ಲ. ಭಾಗಮ್ಮ ಫೋನ್ ಮಾಡಿದರೆ ಸ್ವಿಚ್ಡ್ ಆಫ್ ಎಂದು ಬರುತ್ತಿತ್ತು. ಭಾಗಮ್ಮನ ಪರದಾಟ ಹೇಳತೀರದು. ಸರಿ, ಕೊನೆಗೆ ಆತಂಕ ತಡೀಲಾರ್ದೆ ಶ್ರೀಲಕ್ಷ್ಮಿಯ ಗೆಳತಿಯ ಮನೆಗೆ ಫೋನ್ ಮಾಡಿದಾಗ, ಎತ್ತಿದ್ದು ಅವಳ ಗೆಳತಿಯೇ. ನಮ್ಮ ಕಾಲೇಜಿನಲ್ಲಿ ಯಾವ ಎಜುಕೇಶನ್ ಟೂರೂ ಅರೇಂಜ್ ಮಾಡಿಲ್ಲ ಆಂಟಿ,' ಎಂದು ಅವಳು ಉಲಿದಾಗ ವಿಷಯ ತಿಳಿದು ಭಾಗಮ್ಮ 'ಅಯ್ಯೋ, ಕೆಟ್ನಲ್ಲಪ್ಪೋ' ಎಂದು ಕುಸಿದು ಕುಳಿತರು.

ಹಾಗಾದ್ರೆ ಎಲ್ಲಿ ಹಾಳಾಗಿ ಹೋದಳು? ಯಾರಾದ್ರೂ ಅಪಹರಿಸಿಕೊಂಡು ಹೋದರೇ? ಶ್ರೀಲಕ್ಷ್ಮಿ ಆಟೋ ಡ್ರೈವರ್‌ನೊಂದಿಗೆ ಓಡಿ ಹೋಗಿದ್ದಳು, ಹನಿಮೂನ್ ಆಚರಿಸಲು!!! ಮೂರು ದಿನಗಳ ನಂತರ ಬೆಕ್ಕಿನ ಮರಿಯಂತೆ ಮನೆಯೊಳಗೆ ನುಸುಳಿದ್ದಳು. ಭಾಗಮ್ಮ ಎರಡೇಟು ಬಿಟ್ಟು ಅವಳ ಬಾಯಿ ಬಿಡಿಸಿದರು ಅನ್ನಿ.

ಕಂಚಿನ ಕಂಠದ ಭಾಗಮ್ಮ ಮೆಲ್ಲನೆ ಮಾತಾಡಿದರೂ ಪಕ್ಕದ್ಮನೆಗೆ ಕೇಳಿಸ್ತಿತ್ತು. ಜೊತೆಗೆ ಭಾಗಮ್ಮನಿಗೆ ಮೆಲ್ಲಗೆ ಮಾತಾಡಿ ಅಭ್ಯಾಸವಿದ್ದರೆ ತಾನೇ? 'ಎಲ್ಲಿ ಹಾಳಾಗಿ ಹೋಗಿದ್ಯೇ? ಇವತ್ತು ನಿನ್ನ ಹುಟ್ಲಿಲ್ಲಾನ್ನಿಸಿಬಿಡ್ತೀನಿ,' ಎಂದು ಎಗರಾಡಿದ್ದನ್ನು ಪಕ್ಕದ್ಮನೆ ಪಂಕಜಮ್ಮ ಕೇಳಿಸಿಕೊಂಡರು. ಇರ್ಲಿ, ನಮ್ಮನೆಯವರನ್ನು ಅಂದ ಹಾಗಲ್ಲ. ಅವರಿಗೆ ಸರಿಯಾಗಿ ಬುದ್ಧಿ ಕಲಿಸ್ತೀನಿ ಎಂದು ಪಂಕಜಮ್ಮ ನಿರ್ಧರಿಸಿ ಭಾಗಮ್ಮನ ಮನೆಯೊಳಗೆ ನುಗ್ಗಿದರು.

'ಏನು ಭಾಗಮ್ಮನೋರೆ? ನಿಮ್ಮ ಮಗಳು ಬಂದಿದ್ದು ನೋಡ್ದೆ. ಎಲ್ಲಿ ಹೇಳ್ದೇ ಕೇಳ್ದೇ ಓಡಿ ಹೋಗಿದ್ಲು? ಬೆಕ್ಕು ಕಣ್ಮುಚ್ಚಿಕೊಂಡು ಹಾಲು ಕುಡಿದ್ರೆ, ನಮಗೇನು ಗೊತ್ತಾಗೊಲ್ವೇ? ಹಾಗಾಯ್ತು ನಿಮ್ಮನೆ ಸಮಾಚಾರ? ನಿಮ್ಮನೇಲಿ ಗುಸುಗುಸೂಂತ ಮಾತಾಡ್ತಿದ್ದಿದ್ದು ನಾನು ಕೇಳಿಸ್ಕೊಂಡೆ. ಎಲ್ಲರ ಮನೆ ವಿಷಯದಲ್ಲೂ ಮೂಗು ತೂರಿಸ್ತಿದ್ರಲ್ಲಾ? ಈಗೇನು ಹೇಳ್ತೀರಾ? ಕನ್ನಡೀಲಿ ನೋಡ್ಕೊಳಿ. ನಿಮ್ಮ ಮುಖ, ಪಾಪ, ಇಂಗು ತಿಂದ ಮಂಗನ ಥರಾ ಆಗಿದೆ. ಇರ್ಲಿ, ಮಾಡಿದವರ ಪಾಪ ಆಡಿದವರ ಬಾಯಲ್ಲಿಅಂತಾರಲ್ಲಾ, ಸಧ್ಯ, ಬಡವಾ ನೀ ಮಡಗಿದ ಹಾಗಿರು ಅಂತ ನನಗ್ಯಾಕೆ ನಿಮ್ಮನೆ ಸಮಾಚಾರ? ಬರ್ತೀನಿ, ಭಾಗಮ್ಮನೋರೇ. ನನ್ನ ಮಗಳು ಮದುವೆ ಮಾಡ್ಕೊಂಡು ರಾಜಾರೋಷಾಗಿ ಸಂಸಾರ ಮಾಡ್ತಿದಾಳೆ. ನಿಮ್ಮ ಮಗಳ ಹಾಗೆ ಮೂರು ದಿನ ಮಜಾ

ಮಾಡ್ಕೊಂಡು ವಾಪಸ್ಸು ಬರ್ಲಿಲ್ಲ,' ಎಂದು ಹೇಳಿ ದುರ್ದಾನ ತೆಗೆದುಕೊಂಡವರಂತೆ ಹೊರಟು ಹೋದರು.

ಗಾದೆ ಪ್ರೌಢಿಮೆ ಪ್ರದರ್ಶಿಸಿ ತಮ್ಮ ಬುದ್ಧಿವಂತಿಕೆ ತೋರಿಸಿಕೊಳ್ಳಲು ಯತ್ನಿಸಿದ ಭಾಗಮ್ಮನಿಗೆ ಗಾದೆ ಪ್ರಹಾರ ಬೂಮರ್‍ಯಾಂಗ್ ಆಯಿತು. ಮತ್ತೊಮ್ಮೆ ಅವರ ಬಾಯಿಂದ ಗಾದೆಯ ಮುತ್ತು ಉದುರಿದ್ರೆ ಕೇಳಿ.


**ಕೊರವಂಜಿ–ಅಪರಂಜಿ ಟ್ರಸ್ಟ್ ಹಾಗೂ ಸುಚಿತ್ರಾ ಸಿನೆಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ**

ವತಿಯಿಂದ

**ಪ್ರೊ|| ಭುವನೇಶ್ವರಿ ಹೆಗಡೆ ವಿರಚಿತ**

**ಬೆಟ್ಟದ ಭಾಗೀರಥಿ ಮತ್ತು ಇತರ ಪ್ರಬಂಧಗಳು**

**ಕೃತಿ ಲೋಕಾರ್ಪಣೆ**

| | |
|---|---|
| **ಕೃತಿ ಬಿಡುಗಡೆ ಮತ್ತು ಅಧ್ಯಕ್ಷತೆ** | : **ಪ್ರೊ ಅ.ರಾ. ಮಿತ್ರ,** ಖ್ಯಾತ ಪಂಡಿತರು |
| **ಉದ್ಘಾಟನೆ** | : **ಶ್ರೀ ಎಂ. ಶಿವಕುಮಾರ್,** ಸಂಪಾದಕರು, ಅಪರಂಜಿ |
| **ಕೃತಿಯನ್ನು ಕುರಿತು** | : **ಶ್ರೀಮತಿ ರಶ್ಮಿ ರಾ. ಹೆಬ್ಬೂರು,** ಸಂಪಾದಕಿ, ನಗೆಮುಗುಳು |
| **ಉಪಸ್ಥಿತಿ** | : **ಶ್ರೀಮತಿ ಭುವನೇಶ್ವರಿ ಹೆಗಡೆ,** ನಿವೃತ್ತ ಪ್ರಾಧ್ಯಾಪಕಿ, ಲೇಖಕಿ |
| | : **ಶ್ರೀ ಕೆ.ವಿ.ಆರ್. ಟ್ಯಾಗೋರ್,** ನಿವೃತ್ತ ಪೊಲೀಸ್ ಮಹಾನಿರ್ದೇಶಕರು – ಅಧ್ಯಕ್ಷರು, ಸುಚಿತ್ರಾ ಸಿನೆಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ |
| | : **ಬೇಲೂರು ರಾಮಮೂರ್ತಿ,** ಖ್ಯಾತ ಹಾಸ್ಯ ಬರಹಗಾರರು ಮತ್ತು ವಾಗ್ಮಿಗಳು |

**ದಿನಾಂಕ 12–08–2018, ಭಾನುವಾರ – ಸಮಯ: ಬೆಳಗ್ಗೆ 10.00 ಗಂಟೆಗೆ**

**ಸ್ಥಳ: ಸುಚಿತ್ರಾ ಸಿನೆಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, 13ನೆಯ ಮುಖ್ಯರಸ್ತೆ, ಬನಶಂಕರಿ 2ನೆಯ ಹಂತ, ಬೆಂಗಳೂರು – 70**

ಸಾಹಿತ್ಯ ರಸದೌತಣಕ್ಕೆ ಸರ್ವರಿಗೂ ಆದರದ ಸ್ವಾಗತ

# ಒಂದು ದಿನ ಬೆಂಗಳೂರಿನ ಬಿ.ಎಂ.ಟಿ.ಸಿ. ಬಸ್ಸಿನಲ್ಲಿ

● ಸಂಕೇತ ಅಶೋಕ ಪೂಜಾರ

**ಸಾಗುವ ಬಸ್ಸಿನಲ್ಲಿ ಸಾಗುವಂಥ ಸಂಗತಿಗಳು ಏನೇನು**

ನಾವು ಬೆಂಗಳೂರಿಗೆ ಬಂದು ಸೆಟ್ಲ ಆಗಿ ಹತ್ತು ವರ್ಷಗಳ ಮೇಲೆಯೇ ಆಗಿದೆ. ಹಾಗಾಗಿ ಸ್ವಾಭಾವಿಕವಾಗಿಯೇ ಈ ಊರಿನ ಮೇಲೆ ಪ್ರೀತಿ ಹೆಚ್ಚು. ಮೂಲತಃ ನಾವು ಉತ್ತರ ಕರ್ನಾಟಕದವರು. ಮೊದಲಿನಿಂದಲೂ ಅಪ್ಪನದು ಸರ್ಕಾರಿ ನೌಕರಿಯಾದದ್ದರಿಂದ ರಾಜ್ಯದ ಎಲ್ಲ ಕಡೆಯ ಜನರನ್ನು ನೋಡುವ, ಒಡನಾಟ ಮಾಡುವ, ತಿಳಿದುಕೊಳ್ಳುವ ಸೌಭಾಗ್ಯ ನಮ್ಮದಾಗಿತ್ತು. ಎಲ್ಲ ಕಡೆಗೆ ತಿರುಗಾಟ ಮುಗಿಸಿ ಇಲ್ಲಿ ಬಂದು ಸೆಟ್ಲ ಆದೆವು.

ನಾವು ನಮ್ಮ ಹಳ್ಳಿಗೆ ಹೋದಾಗಲೆಲ್ಲ ವಿಶೇಷ ಗೌರವ. "ಏಯ್, ಅಂವಾ ಬೆಂಗ್ಳೂರಿಂದ ಬಂದಾನಂತ್ಲೆ!!" ಇಂಥ ಭಾವನೆ ನನ್ನಲ್ಲಿ ಹುಟ್ಟುತ್ತಿದ್ದುದು ಮೈಸೂರಿನ ಮೃಗಾಲಯದಲ್ಲಿ ವೈಟ್ ಟೈಗರ್‌ನ್ನು ನೋಡುವ ಅವಕಾಶ ಸಿಕ್ಕಾಗ ಮಾತ್ರ. ಗೆಳೆಯರ ಮನೆಯಲ್ಲಿ, ನಾವು ಬೆಂಗಳೂರಿನವರು ಅನ್ನುವ ಏಕ ಮಾತ್ರ ವಿಶೇಷ ಸಂಗತಿ ನಮ್ಮನ್ನು ಬರೀ ನೀರಿನ ಬದಲು ಪಾನಕ ಅಥವಾ ಟೀ ಗೆ ಅರ್ಹರನ್ನಾಗಿ ಮಾಡುತ್ತಿತ್ತು. ನಾವು ಕೂಡ ಅದೇ ಗತ್ತನ್ನು ಒಂದು ರೇಂಜ್‌ಗೆ ಮೆಂಟೇನ್ ಮಾಡ್ಕೊಂಡು ಬಂದಿದೀವಿ.

ಈಗ ಆ ಹಳ್ಳಿಯ ಸುದ್ದಿ ಬೇಡ. ನಮ್ಮ ಬೆಂಗಳೂರಿನ ಹೆಚ್ಚಿನ ಜನರು ಯಾವುದೇ ಸಂಕೋಚವಿಲ್ಲದೆ ಹೆಮ್ಮೆ ಪಡುವುದು ಈ ಬಿ.ಎಂ.ಟಿ.ಸಿ. ಬಸ್ಸುಗಳ ಮೇಲೆ. ಮೇಲಿಂದ ಮೇಲೆ ಟೈಮಿಗೆ ಸರಿಯಾಗಿ ಬರುವ, ಲೈಟಾಗಿ ಕಪ್ಪು ಹೊಗೆ ಬಿಡುವ, ಬಗೆ–ಬಗೆಯ ಜಾಹೀರಾತುಗಳಿರುವ, ಅಲ್ಲಲ್ಲಿ ಕೆಂಪು ಕಲೆಗಳಿರುವ (ಕಲೆಗಳ ಮೂಲಕ್ಕೆ ಹೋಗುವುದು ಬೇಡ) ಈ ಬಸ್ಸುಗಳನ್ನು ನೋಡೋದೇ ಒಂದು ಆನಂದ.

ನನಗೆ ಒಂದು ದಿನ ಇಂತಹ ಅಪೂರ್ವ ವಾಹನದಲ್ಲಿ ಪ್ರಯಾಣ ಮಾಡುವ ಅವಕಾಶ ದೊರಕಿ ಬಂತು. ಅಲ್ಲಿ ನನಗೆ ಆದ ಅನುಭವ ಮರೆಯಲಾಗದಂಥದ್ದು. ಅಂದು ರವಿವಾರವಾದದ್ದರಿಂದ ಬಹಳ ಸರಳವಾಗಿಯೇ ಸೀಟು ದೊರಕಿತು. ಅದೂ ಕಿಟಕಿ ಪಕ್ಕ. ನನ್ನ ಬಳಿ ಒಬ್ಬ ನಲವತ್ತರ ಹರೆಯದ ವ್ಯಕ್ತಿ ಬಂದು ಕುಳಿತ. ನಾನು ನೋಡಲು ದಪ್ಪ (ನೋಡಲೇನು? ಇರುವುದೂ ದಪ್ಪಾನೆ! ಇರಲಿ). ಹಾಗಾಗಿ ಅವನು ಕುಳಿತುಕೊಳ್ಳಬೇಕಾದ ಜಾಗವನ್ನು ಸ್ವಲ್ಪರ ಮಟ್ಟಿಗೆ ಆಕ್ರಮಿಸಿದ್ದೆ ಎಂದು ಕಾಣುತ್ತದೆ. ನಾನು ಅವನ ಪರ್ಮಿಶನ್ ಇಲ್ದೆ ಒಂದು ಕಿಡ್ನಿಯನ್ನು

ತಗೊಂಡಿದ್ದೀನಿ ಅನ್ನೋ ಅಷ್ಟೇ ಕೋಪದಿಂದ ನೋಡಿದ. ಅರ್ಥವಾಯಿತು. ಕಿಟಕಿಯ ಕೆಂಪು ಕಲೆಗಳಿಗೆ ಇನ್ನೂ ಹತ್ತರ ಹೋಗಿ ಕುಳಿತೆ. ಅವನು ಕುಳಿತುಕೊಂಡ. ಟಿಕೆಟ್ ತೆಗೆದುಕೊಂಡು ತನ್ನ ಕಿಸೆಯಿಂದ ಮೊಬೈಲ್ ತೆಗೆದು ಏನೋ ಹುಡುಕಲಾರಂಭಿಸಿದ. ನಾನು ನನ್ನ ಪಾಡಿಗೆ ಇದ್ದರಾಯಿತೆಂದು ಕಿಟಕಿಯಿಂದಾಚೆಗೆ ಆಸಕ್ತಿ ತರುವ ವಸ್ತುಗಳ ಅಥವಾ ಮನುಷ್ಯರ ಹುಡುಕಾಟ ನಡೆಸಿದೆ. ಅಷ್ಟರಲ್ಲಿ ಎದೆ ಝುಲ್ಲೆನ್ನುವ, ಭೂಮಿ ಅಲುಗಾಡುವ, ಬಸ್ಸಿನ ಕಿಟಕಿ ಢಗ–ಢಗ ಎನಿಸುವ ಒಂದು ಶಬ್ದ ಕೇಳಿ ಬಂತು. ಅದು ಎಲ್ಲಿಂದ ಅಂದರೆ ನನ್ನ ಪಕ್ಕದಲ್ಲಿರುವ ಈ ಪುಣ್ಯಾತ್ಮನ, 'ಹಲೋ' ಶಬ್ದದಿಂದ 'ಅಣ್ಣಯ್ಯಾ ನಿನಗ್ ಖರೇನ ಫೋನ್ ಮಾಡಬೇಕೇನಪ್ಪಾ?' ಅಂತ ಕೇಳುವ ಮನಸ್ಸಾಯಿತು. ಅಲ್ಪ ಸ್ವಲ್ಪ ಅಭ್ಯಾಸ ಮಾಡಿಕೊಂಡಿರುವ ಪ್ರಾಣಾಯಾಮದಿಂದ ತಾಳ್ಮೆ ತಂದುಕೊಂಡು ಸುಧಾರಿಸಿಕೊಂಡೆ.

ಅವನ ವಾಣಿ ಮುಂದುವರೆಯಿತು, "ಏ!! ಪುಟ್ಟಕ್ಕಗ ಮಾರ್ಕಸ್ (ಮಾರ್ಕ್ಸ್) ಎಷ್ಟ್ ಬಿದ್ದಾವ? ಪಾಸಾಗ್ಯಾಳ ಹೌದಲ್ಲೊ? ಗಣಿತ ಪಾಸಾಗ್ಯಳ? ಆತಲ್ಲಾ ಹಂಗಾದ್ರ, ಬ್ಯಾಂಕನ್ಯಾಗ ನೌಕರಿ ಸಿಗತದ, ಭುಲೊ ಆತು, ತುಗೋ. ಇಡ್ಲ್ಯಾ? ಹಲೋ! (ಮತ್ತೆ ಮೊದಲಿನ "ಹಲೋ" ಅಷ್ಟೇ ಜೋರಾಗಿ) ಹಾಂ, ಹಾಂ, ಇಡತೀನಿ ತಗೋ, ಚಂಜೀಕಿನ್ (ಸಾಯಂಕಾಲದ) ಗಾಡಿಗ್ಗೆ ಕುಂದರ್ತೀನಿ ತಗೋ, ಬಿಟ್ಟ ಮ್ಯಾಗ ಪೋನ್ ಹಚ್ಚತೀನಿ!" ನಡುವಿನ ಒಂದು ಬಸ್ ಸ್ಟಾಪ್ ಬಂದಿದ್ದರಿಂದ ಪುಟ್ಟಕ್ಕ ಪಾಸಾದ ವಿಷಯ ನಮ್ಮ ಬಸ್ಸಿನಲ್ಲಿರುವ ಜನರಿಗೆ ಮಾತ್ರವಲ್ಲದೇ ಬಸ್ ಸ್ಟಾಪ್‌ನಲ್ಲಿರುವವರಿಗೂ ಗೊತ್ತಾಯಿತು. ಫೋನ್ ಇಟ್ಟ ಮೇಲೆ ಈತ ನನ್ನ ಕಡೆಗೆ ತಿರುಗಿ "ಪಾಸಾಗ್ಯಾಳ್ರೀ!! ಮಗಳು ಪಾಸಾಗ್ಯಾಳ್ರೀ!!" ಅಂತ ಮುಗುಳ್ನಗುತ್ತಾ ತನ್ನ ಕೈಚೀಲದಿಂದ ಒಂದು ಸ್ವೀಟ್ ಬಾಕ್ಸ್ ತೆಗೆದು "ತೊಗೊಳ್ರಿ ಒಂದು ಫೇಡೆ" ಎಂದ. ಆ ಮನುಷ್ಯನ ಮುಗ್ಧತೆ, ಕಾಳಜಿ, ಸಂತೋಷ ಹಂಚಿಕೊಳ್ಳುವ ಸ್ವಭಾವ ಎಲ್ಲವೂ ನನ್ನನ್ನು ಬೌಲ್ಡ್ ಮಾಡಿತು. ನಮ್ಮಲ್ಲಿ ಎಷ್ಟು ಜನ ಇವನಂತೆ ಇದ್ದೇವೆ?. ಪಕ್ಕದ ಮನೆಯವರನ್ನೇ ಸರಿಯಾಗಿ ಮಾತನಾಡಿಸದ ನಾವು ಇನ್ನು ಬಸ್‌ನಲ್ಲಿ ಬಂದವರನ್ನು ಮಾತನಾಡಿಸುವುದೇ?

ನಾನು ಒಂದು ಫೇಡೆ ತೆಗೆದುಕೊಂಡು, "ನಾನೂ ಕೂಡ ಗದಗಿನವನು" ಎಂದೆ. ನಮ್ಮ ಉತ್ತರ ಕರ್ನಾಟಕದ ಮಂದಿಯಲ್ಲಿ ಸರ್ವೇ ಸಾಮಾನ್ಯವಾಗಿ ಒಂದು ಸ್ವಭಾವ ಕಂಡು ಬರುತ್ತದೆ. ಉತ್ತರ ಕರ್ನಾಟಕವನ್ನು ಬಿಟ್ಟು ಬೇರೆ ಯಾವುದೇ ಪ್ರದೇಶದಲ್ಲಿ ಉತ್ತರ ಕನ್ನಡ ಭಾಷೆಯಲ್ಲಿ ಮಾತನಾಡುವವರನ್ನು ಕಂಡರೆ, ಹಂಪಿಯಲ್ಲಿ ಯಾರೋ ಒಬ್ಬ ಆಶಾವಾದಿ ರಾತ್ರಿಯಲ್ಲಿ ನೆಲ ಅಗಿಯುವಾಗ ಅವನಿಗೆ ನಿಧಿ ಸಿಕ್ಕರೆ ಯಾವ ಆನಂದ ಉಂಟಾಗುತ್ತದೋ ಅದೇ ಆನಂದ, ಆಹ್ಲಾದ ನಮಗೂ ಉಂಟಾಗುತ್ತದೆ, ಅವನೂ ಅಷ್ಟೇ. ತುಂಬಾ ಸಂತೋಷದಿಂದ ಕೈಕುಲಿಕಿಸಿ, "ನೀವು ಗದಗಿನವರು ಅಂತ ಮೊದಲ ಹೇಳ್ಬೆಕಿಲ್ರಿ?" ಎಂದ. ಮೊದಲೇ ಹೇಳಿದ್ದರೆ ಒಂದರ ಬದಲು

ಎರಡು ಫೇಡೆ ಸಿಗುತ್ತಿತ್ತೋ ಅಥವಾ ಈಗಷ್ಟೇ ಮುಗಿದ ತನ್ನ ಹಳ್ಳಿಯ ಪಂಚಾಯ್ತಿ ಎಲೆಕ್ಷನ್ ನಲ್ಲಿ ತನ್ನ ಬದಲು ನನ್ನನ್ನು ನಿಲ್ಲಿಸಿ ಗೆಲ್ಲಿಸುತ್ತಿದ್ದನೋ ಗೊತ್ತಿಲ್ಲ.

ಮಾತು ಮುಂದುವರೆಸಿದ. ತನ್ನ ಜಮೀನಿನ ಸರ್ವೆ ಎಷ್ಟು ಅನ್ನುವದರಿಂದ ಹಿಡಿದು ತನ್ನ ಯಾವ ಯಾವ ಜಮೀನಿನಲ್ಲಿ ಯಾವ ಭಾಗದಲ್ಲಿ ಯಾವ ಬೆಳೆಯಿದೆ ಎಂಬ ಸಂಗತಿಗಳವರೆಗೂ ಮಾತನಾಡಿದ. ಅವನ ಮಾತು ನನಗೆ ಎಷ್ಟರ ಮಟ್ಟಿಗೆ ಸಂಬಂಧವಿತ್ತೊ ಗೊತ್ತಿಲ್ಲ. ಆದರೆ ಕೇಳಲಂತೂ ಸೊಗಸಾಗಿತ್ತು. ಇನ್ನು ನಾನು ಮಾತನಾಡದಿದ್ದರೆ ಸರಿ ಕಾಣಲಾರದೆಂದು ತಿಳಿದು ನನ್ನ ಬಗ್ಗೆ ಹೆಮ್ಮೆಯ ಪರಿಚಯ ಶುರು ಮಾಡಿದೆ. ನಾನು ಒಬ್ಬ ಸಾಫ್ಟವೇರ್ ಇಂಜಿನಿಯರ್ ಎಂದು, ನಮ್ಮ ದೇಶದ ಒಬ್ಬನಿಗೂ ಸಹಾಯ ಮಾಡದೆ ವಿದೇಶಿಗಳ ಬೇಡಿಕೆಗಳನ್ನು ನನ್ನ ಹೆಂಡತಿಯ ಬಯಕೆಗಳಷ್ಟೇ ಮಹತ್ವದಾಯಕ ಎಂದು ತಿಳಿದು ಕೆಲಸ ಮಾಡುವೆನೆಂದು, ವಾರದ ಜೀವನವನ್ನು ಕೊನೆಯ ಎರಡು ದಿನಗಳಂದು ಜೀವಿಸುವೆನೆಂದು, ಜ್ವರ ಕೆಮ್ಮು, ನೆಗಡಿ ಬಂದರೆ ಅವುಗಳೂ ಕೂಡ ನಿವಾರಣೆಗೆ ಆ ಎರಡು ದಿನಗಳಿಗಾಗಿ ಕಾಯಬೇಕೆಂದೆಲ್ಲಾ ಹೇಳತೊಡಗಿದೆ. ಕೊನೆಯ ವಿವರಣೆಗಾಗಿ, ಒಂದಿಷ್ಟು ಕನಿಕರ ನಿರೀಕ್ಷಿಸುತ್ತಿದ್ದ ನನಗೆ ಅವನು ನಕ್ಕಿದ್ದನ್ನು ನೋಡಿ ಪಿತ್ತ ನೆತ್ತಿಗೇರಿತು. ಅದಕ್ಕೆ ನಾನು, "ನಿಮ್ ಹಳ್ಳ್ಯಾಗ ಟೈಮಿಗೆ ಸರಿಯಾಗಿ ಡಾಕ್ಟರ್ ಬರ್ತಾರೆನ್ಪಾ? ನಗ್ತೀಯಲ್ಲಾ!!" ಎಂದೆ. ಅದಕ್ಕವನು ಮುಗುಳ್ನಕ್ಕು, "ಅಲ್ರೀ ಸಾಹೇಬ್ರ! ತಪ್ಪು ತಿಳೀಬ್ಯಾಡ್ರಿ! ನಾನು ನಿಮ್ಮ್ ಮ್ಯಾಲೆ ನಕಲಿ ಮಾಡಿ ನಗಲಿಲ್ರೀಪ್ಪಾ! ಜ್ವರ ಯಾವಾಗ್ ಬರ್ತದೋ ಆವಾಗ್ ತೊರ್ಸೊದನ್ ಬಿಟ್ಟು ಶನಿವಾರ, ಆದಿತ್ಯವಾರ ಅಂತ ಕೂಡ್ತಿರಲಾ, ಅದಕ್ಕ ನಗು ಬಂತು.. ಕ್ಷಮಸ್ರೀ. ನಮ್ ಹಳ್ಳಿ ವಿಚಾರಕ್ಕ ಬರೋಣು. ಈಗ ಮೊದ್ಲಿನ್ಹಂಗ ಇಲ್ರೀ. ಮೊದಮೊದಲ ಹಂಗ ಇತ್ತು. ನಾವು ಯಾರಿಗರ ಆರಾಮಿಲ್ಲಂದ್ರ ದೂರ ದೂರ ಹೋಗಿ ತೋರಸ್ಕೊಂಡು ಬರ್ತಿದ್ವಿ. ಸರಕಾರದವರು ಏನೋ ಭಾಳ ಪ್ರಯತ್ನ ಮಾಡ್ತರ. ಆದ್ರ ಎಲ್ಲಾ ಟೈಮಿಗೂ ಡಾಕ್ಟರ್ ಇರತಾರ ಅಂತ ಹೇಳ್ಲಿಕ್ಕೆ ಬರ್ತಿಲ್ಲ. ಅದಕ್ಕ ನಾವ ಹಳ್ಳಿ ಮಂದಿ ಒಂದು ಗುಂಪುಗೂಡಿ ಧಾರವಾಡಕ್ ಹೋಗಿ ಒಂದಿಷ್ಟು ವೈದ್ಯರ ಮುಂದ ನಮ್ಮ ಸಮಸ್ಯೆ ಹೇಳ್ಕೊಂಡ್ವಿ. ಆವಾಗ ಅವರೂ ವಿಚಾರ ಮಾಡಿ, ತಮ್ಮ ಹತ್ರ ಕಲೀಲಿಕ್ಕೆ ಅಂತ ಹೇಳಿ ಜೂನಿಯರ್ ಡಾಕ್ಟರ್ ಬರ್ತಾರಲ್ರೀ, ಅವರನ್ನ ಪಾಳೆ ಮ್ಯಾಲೆ ನಮ್ಮ ಹಳ್ಳಿಗೆ ಕಳಸ್ಲಿಕ್ಕೆ ಶುರು ಮಾಡಿದ್ರು... ಹಿಂಗ ಕೆಲಸ ಆಗ್ಬೇಕಂದ್ರ ಅವ್ರನ್ನ್ ಇವ್ರನ್ ಬೈಯೊದ್ ಬಿಟ್ಟು ನಾವ ಏನರ ಮಾಡ್ಬೇಕ್ ಹೌದಿಲ್ರೀ !" ಎಂದ.

ಅವನ ಮಾತುಗಳನ್ನು ಕೇಳಿ ಮುಖ ಮುಚ್ಚಿಕೊಳ್ಳಲು ಪರದೆಯ ಹುಡುಕಾಟ ನಡೆಸಿದೆ. ಅವನು ತನ್ನ ಬಗ್ಗೆ ಹೇಳಿಕೊಳ್ಳುವಾಗಲೇ ಇವನೊಬ್ಬ ರೈತ ಎಂದು ಗೊತ್ತಾಗಿತ್ತು. ಮತ್ತೇನು ಕೇಳುವುದು ಎಂದು ಯೋಚಿಸುವಷ್ಟರಲ್ಲಿ ನನಗೇ ಗೊತ್ತಾಗದ ಹಾಗೆ ನನ್ನ ಬಾಯಿಂದ "ಬೆಂಗ್ಳೂರಿಗೆ ಯಾರನ್ನರ ಭೆಟ್ಟಿ

TEMPLE OF KNOWLEDGE

DISTANCE EDUCATION

(Govt. & UGC Recognised Universities)

# BEECHI VIDYA KENDRA

ADMISSION OPEN - APPLY NOW

CENTER OF DISTANCE LEARNING

MBA WITH 6 SPECIALIZATIONS,
MA, M.COM, MCA, MSc-BT,
PGDCS, BA & B.COM - AGE BASIS

Email : admin@beechi.in Web : www.becchi.in
Mob. 9035302302, 9035007003

PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE OF KNOWLEDGE

Email : admin@beechi.in
Web : www.becchi.in
Mob. 9740968677

ಆಗ್ಲಿಕ್ಕೆ ಬಂದಿದ್ರೇನು?" ಎಂಬ ಪ್ರಶ್ನೆ ಬಂದು ಬಿಟ್ಟಿತು, ನಮ್ಮ ಬೆಂಗಳೂರಿನ ಪದ್ಧತಿಯಲ್ಲಿ ಇದು, "ನನ್ ಆಫ್ ಯುವರ್ ಬಿಸಿನೆಸ್" ಎಂಬ ಉತ್ತರಕ್ಕೆ ಅರ್ಹವಾಗಿರುವ ಪ್ರಶ್ನೆ. ಕೊಂಚ ಸಂಕೋಚದಿಂದ ನನ್ನ ಕಡೆಗೆ ನೋಡಿ ಮುಗುಳ್ನಕ್ಕ. ಬೇಕಿತ್ತೆ ನನಗೆ? ಎಂದೆನ್ನುಕೊಳ್ಳುವಷ್ಟರಲ್ಲಿ ಅವನು ಉತ್ತರಿಸಿದ.

"ಇಲ್ರೀ ನನಗ ಜಿಲ್ಲಾ ಮಟ್ಟದಾಗ 'ಶ್ರೇಷ್ಠ ಕೃಷಿಕ' ಅಂತ ಹೇಳಿ ಪ್ರಶಸ್ತಿ ಸಿಕ್ಕದ. ಅದರ್ದ ಪ್ರಶಸ್ತಿ ಪ್ರದಾನ ಸಮಾರಂಭ ಇವತ್ತಿತ್ತು. ಈಗ ಕೃಷಿ ಮಂತ್ರಿ ಕಡೆಯಿಂದ ಪ್ರಶಸ್ತಿ ಸ್ವೀಕರಿಸಿ ಇವತ್ತ ರಾತ್ರಿ ಊರಿಗೆ ಹೊಳ್ಳಿ ಹೊಂಟೀನ್ ನೋಡ್ರಿ. ಅದರ್ದ ಫೇಡೆ ಇದು. ಇನ್ನೊಂದ್ ತೊಗೊತಿದ್ರ ತೊಗೊರಿ" ಎಂದು ಆ ಡಬ್ಬಿಯನ್ನು ನನ್ನತ್ತ ಹಿಡಿದ. ಅವನಿಗೆ ಬ್ರಹ್ಮಾಂಡ ದರ್ಶನ ಮಾಡಿಸಲಿಕ್ಕೆಂದೇ ಬಾಯಿ ತೆರೆದಿದ್ದೇನೋ ಎಂದು ಅವನಿಗೆ ಅನ್ನಿಸುವಷ್ಟರಲ್ಲಿ ನನ್ನ ಬಾಯಿ ಮುಚ್ಚಿ ಸುಧಾರಿಸಿಕೊಂಡೆ.

ಬರುಬರುತ್ತಾ ನನಗೆ ತಿಳಿದಿದ್ದು ಅವನು ಕಿರುಚಾಡುವ ಕೇಜ್ರಿವಾಲ್ ಅಲ್ಲ, ಮೋಡಿ ಮಾಡುವ ಮೋದಿ ಎಂದು. ಗೌರವ ಮೂಡಿ ಬಂತು. ಇವನನ್ನು ಭೇಟಿ ಮಾಡಿದ್ದು ನನ್ನ ಪುಣ್ಯ ಎಂದೆನಿಸಿತು. ನಾನು ಹೆಚ್ಚಿನ ಮಾತುಗಳನ್ನಾಡುವಷ್ಟರಲ್ಲಿ ಅವನು "ನನ್ನ ಸ್ಟಾಪ್ ಬಂತ್ರೀ. ಇಲ್ಲೇ ಇವತ್ತ ಒಂದು ಸಿನಿಮಾ ನೋಡಿ ಊರಿಗೆ ಹೊಂಡವಿದ್ದೀನಿ. ನೀವು ಬರ್ತೀರೇನು ಅಂತ ಕೇಳವಿದ್ದೆ. ಇರ್ಲಿ ನಿಮಗೆ ಟೈಮ್ ಇರೊದಿಲ್ಲ." ಇಳಿಯುವಾಗ ಬಾಗಿಲಿನಿಂದ, "ಆದ್ರೂ ನೀವು ಬೆಂಗ್ಳೂರಿನವ್ರು ಭಾರಿ ಬಿಡ್ರಿ" ಎಂದ. "ಏನ್ ಭಾರಿನೋ ಏನೋ, ಭಾರಂತೂ ಇದ್ದೀನ್ ನೋಡ್ಪಾ. ನಿನ್ನ ಭೆಟ್ಟಿಯಾಗಿ ಖುಷಿಯಾತು" ಎಂದೆ.

ಅವನು ಇಳಿದುಕೊಂಡ. ಬಸ್ಸು ಹೊರಟೇ ಬಿಟ್ಟಿತು. ನಾನು ಕಿಟಕಿಯಿಂದ ಅವನನ್ನೇ ನೋಡುತ್ತಿದ್ದೆ. ಅವನು ಸಂಕೊಚವಿಲ್ಲದೆ, ಪುಟ್ಟ ಮಕ್ಕಳ ಹಾಗೆ ನನಗೆ ಟಾಟಾ ಮಾಡುತ್ತಾ ನಗುತ್ತಾ ನಿಂತಿದ್ದ. ಆಹಾ!! ಅದೆಂಥ ನಗು. ಮರೆಯಲಾಗದಂಥ ನಿಷ್ಕಲ್ಮಷ ನಗು. ನೆಮ್ಮದಿಯಿಂದಿದ್ದೇನೆ ಎಂದು ಬೀರುವ ನಗು. 'ಬಂದದ್ದು ಬರಲಿ. ಒಂದು ಕೈ ನೋಡಿಯೇ ಬಿಡುತ್ತೇನೆ', ಎನ್ನುವ ಶಕ್ತಿಯುತ ನಗು. 'ಯಾರು ಏನನ್ಕೊತಾರೋ ಅನ್ಕೊಳಿ! ಸರಿ ಅಂತ ಕಂಡದ್ದನ್ನೇ ಮಾಡಬೇಕು' ಎಂದು ಸಾರುವ ನಗು. ಅವನೊಡನೆ ಸಂಪರ್ಕ ಇಟ್ಟುಕೊಳ್ಳಬಹುದಿತ್ತೊ ಏನೊ ಎಂದೆನಿಸಿತು. ಆದರೆ ನಾನೆಂಥ ದಡ್ಡ ನೋಡಿ. ಅವನ ಹೆಸರನ್ನೂ ಕೇಳಲಿಲ್ಲ. ಯಾವ ಊರಿನವನೆಂದೂ ಕೇಳಲಿಲ್ಲ.

ಕೆಲವರು ಹೀಗೆ. ಇಷ್ಟೇ ಸಮಯದಲ್ಲಿ ನಮ್ಮ ಮೇಲೆ ಎಂಥ ಪ್ರಭಾವ ಬೀರುತ್ತಾರೆ! ಮರೆಯಲಾಗದಂಥ ಮನುಷ್ಯ. ನಮ್ಮ ದೈನಂದಿಕ ಜೀವನದಲ್ಲಿ ಇಂಥ ಎಷ್ಟೋ ಮಹಾತ್ಮರು, ಸಾಧಕರು ಅಡಗಿರುತ್ತಾರೆಂದು ನನ್ನ ಅನಿಸಿಕೆ. ಎಲ್ಲಾ ಸಮಯದಲ್ಲೂ ಎಲ್ಲರ ಮಕ್ಕಳು ಪರೀಕ್ಷೆಯಲ್ಲಿ ಪಾಸಾಗಿದ್ದ ಸುದ್ದಿ ಬಂದು ಫೇಡೆ ಡಬ್ಬಿ ಹಿಡಿದು ತಾವಾಗಿ ತಾವೇ ಮಾತಾಡಿಸುವ ಸಂದರ್ಭಗಳು ಬರಲಿಕ್ಕಿಲ್ಲ.

ನಾವೇ ಮಾತು ಶುರು ಮಾಡೋಣ. ನಗಿಸೋಣ. ನಗೋಣ. ಅಪರಿಚಿತರ ಜೊತೆ ನಗು ಹಂಚಿಕೊಳ್ಳುವುದರಲ್ಲಿ ಏನೋ ನೆಮ್ಮದಿಯ ರುಚಿ ಇದೆ. ಸವಿಯೋಣ. ಇಂಥ ಸಾಧಕನ ಜೊತೆ ಬೆರೆಯುವ ಸದಾವಕಾಶ ಒದಗಿಸಿಕೊಟ್ಟ ಸಾರಿಗೆ ಇಲಾಖೆಗೆ ಹೃದಯಾಂತರಾಳದ ವಂದನೆ.

ನನ್ನದೊಂದೇ ಒಂದು ಕಿವಿಮಾತು. ಬಸ್ ಸ್ಟಾಪ್‌ನಲ್ಲಿ ಜನ ಹತ್ತುತ್ತಿದ್ದಾರೆಂದರೆ ಪಕ್ಕದ ಸೀಟ್ ಅನ್ನು ಎನ್ಕ್ರೋಚ್ ಮಾಡದೆ ಕುತೂಹಲದಿಂದ ನಿಮ್ಮ ಸಹಪ್ರಯಾಣಿಕನಿಗಾಗಿ ಕಾಯಿರಿ. ಅವರ ಸಾಧನಾಗಾಥೆ ನಮ್ಮೆಲ್ಲರಿಗೂ ಸ್ಫೂರ್ತಿಯಾಗಲಿ.

## ಚಿಕಿತ್ಸೆ

ಐಟಿ ನೌಕರಿ ಹಿಡಿದ ವ್ಯಕ್ತಿಗೆ ಕಾಯಿಲೆ ಆಯಿತು. ಯಾವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲೂ ಚಿಕಿತ್ಸೆ ಸಿಗಲಿಲ್ಲ. ಪಶು ವೈದ್ಯರನ್ನು ನೋಡಿ ಎಂದಳು ಹೆಂಡತಿ.

ಪಶು ವೈದ್ಯ? ನಿನಗೇನು ಹುಚ್ಚೆ? ಗಂಡ ಕೇಳಿದ.

ಖಂಡಿತ ಇಲ್ಲ. ಬೆಳಿಗ್ಗೆ ಪಕ್ಷಿಗಳ ತರಹ ಬೇಗ ಏಳ್ತೀರ. ಕಾಗೆ ತರಹ ಅರೆ ಸ್ನಾನ ಮಾಡ್ತೀರ. ಕೋತಿ ತರ ಗಬಗಬ ಅಂತ ತಿಂತೀರ. ಕುದುರೆ ತರಹ ಆಫೀಸಿಗೆ ಓಡ್ತೀರ. ಸಂಜೆ ಮನೆಗೆ ಬಂದು ನಮ್ಮ ಮುಂದೆ ನಾಯಿ ತರಹ ಬೊಗಳ್ತೀರ. ನಂತರ ಮೊಸಳೆ ತರಹ ತಿಂತೀರ. ಆಮೇಲೆ ಎಮ್ಮೆ ತರಹ ಮಲಗ್ತೀರ. ಅದಕ್ಕೆ ನಿಮಗೆ ಪಶುವೈದ್ಯರು ಬೇಕು ಎಂದಿದ್ದು ಎಂದಳು ಹೆಂಡತಿ.

ಹೆಂಡತಿ ಕಡೆ ದುರುಗುಟ್ಟಿದ.

ಈಗ್ಯಾಕೆ ಗೂಬೆ ತರಹ ನೋಡ್ತಿದೀರ? ಎಂದಳು ಅವಳು.

## ಪರಿಹಾರ

ಟೀಚರ್ ಬೋರ್ಡಿನ ಮೇಲೆ ಬರೆದರು;

*36x + yx, 2/3yx + 3x (66y + 12x).b =0*

ಮಾಧು, ಈ ಸಮಸ್ಯೆ ಬಿಡಿಸು ಎಂದರು ಟೀಚರ್.

ಮಾಧು ಡಸ್ಟರ್ ಕೈಗೆತ್ತಿಕೊಂಡು ಬೋರ್ಡ್ ಅಳಿಸಿ 'ಸಮಸ್ಯೆ ಬಗೆಹರಿಯಿತು ಸರ್' ಎಂದ.

ನಮ್ಮ ಕೆಲವು ಸಮಸ್ಯೆಗಳಿಗೆ ಅಂತಹುದೇ ಪರಿಹಾರ ಬೇಕಲ್ಲವೆ?

# ವರ ಬೇಕಾಗಿದೆ!

● ಸಹನಾ ಪ್ರಸಾದ್

**ಪಿಂಕ್ಸ್ ಬಯೊಡಾಟಾ ಪಾರೂಗೆ ಹಿಡಿಸಿತು**

ಮುದ್ದು ಮೊಮ್ಮಗಳು, ಪಿಂಕ್ಸ್ – ಅಂದರೆ ಪ್ರಿಯಾಂಕ –ಏಕಾಗ್ರತೆಯಿಂದ ಮೊಬೈಲು ನೋಡುತ್ತಿರುವುದು ಪಾರು, ಅಲಿಯಾಸ್ ಪಾರ್ವತಿಗೆ ಹೊಸತೇನಲ್ಲ. ಅಜ್ಜಿ, ಮೊಮ್ಮಗಳು ಸೋಶಿಯಲ್ ಮೀಡಿಯಾದಲ್ಲಿ ಸಾಕಷ್ಟು ಪರಿಣಿತರು. ಫೇಸ್ಬುಕ್, ವಾಟ್ಸಾಪ್, ಇನ್ಸ್ಟಾಗ್ರಾಮ್ ಮುಂತಾದುವುಗಳಲ್ಲಿ ನುರಿತಿರುವರು. ಪಾರುಗೆ 75 ಆದರೂ ಜೀವನೋತ್ಸಾಹ ಮಾತ್ರ 22ರ ಹರೆಯದ ಪಿಂಕ್ಸ್‌ಗೆ ಸರಿಸಮಾನ. ಅವಳೂ ಸಹ ಯಾವಾಗಲೂ ಮೊಬೈಲಿನಲ್ಲೇ ಮುಳುಗಿರುತ್ತಾಳೆ. ಆದರೂ ಈ ದಿನ ಕುತೂಹಲ ಜಾಸ್ತಿಯಾಯಿತು. ಕಾರಣ ಪಿಂಕ್ಸ್ ಮುಖದಲ್ಲಿದ್ದ ಮಾಮೂಲಿ ಪೆದ್ದು ಕಳೆ, ಪೆಚ್ಚು ನಗು ಬದಲು ತುಂಟ ನಗು, ಕೊಂಚ ಲಜ್ಜೆ ಮನೆ ಮಾಡಿತ್ತು. ಬಗ್ಗಿ ನೋಡಲು ಪ್ರಯತ್ನಿಸಿದಾಗ ಅವಳೆಣಿಸಿದಂತೆ ಒಬ್ಬ ಹುಡುಗ ಇರಲಿಲ್ಲ. ಸುಮಾರು ಗಂಡುಗಳ ಪಟ ಕಂಡಿತು. ಅಜ್ಜಿಯತ್ತ ನೋಡಿ ಮೊಮ್ಮಗಳು ನಕ್ಕಳು.

"ಅಯ್ಯೊ, ಪಾರು, ನನ್ನ ಬಳಿ ಕುಳಿತು ನೋಡು, ಕದ್ದು ನೋಡುವೆಯೇಕೆ" ಎಂದು ರಾಗವಾಗಿ ಹಾಡಿದಾಗ ತೊಟ್ಟ ಚೂಡಿದಾರ್ ಸರಿಮಾಡುತ್ತ ಪಾರು ಆಸೀನಳಾದಳು. ಸೊಸೆ ಬಸುರಿ ಎಂದು ಗೊತ್ತಾದ ತಕ್ಷಣ ತಾನು ಅಜ್ಜಿ ಎಂದು ಕರೆಸಿಕೊಳ್ಳುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟಿದ್ದಳು. ಬರ್ಗಂಡಿ ಕಲರ್ ಕೂದಲಿಗೆ ಹಚ್ಚಿ, ಚಿನ್ನದ ಬದಲು ನಕಲಿ ಒಡವೆ ಧರಿಸಿ, ಕುರ್ತಾ, ಚೂಡಿದಾರ್ ಹಾಕುವ, ಕೊಂಚ ಹೊಟ್ಟೆ ಬಿಟ್ಟರೆ ಇನ್ನು ಸಣ್ಣ ವಯಸ್ಸಿನಂತೆ ಕಾಣುವ ಪಾರುವನ್ನು "ಅಜ್ಜಿ" ಎನ್ನಲು ಯಾರಿಗೂ ಮನಸ್ಸು ಬರುತ್ತಿಲ್ಲದಿದ್ದು ಬೇರೆ ವಿಷಯ ಬಿಡಿ.

ಪಿಂಕ್ಸ್ ಪಕ್ಕ ಕೂತ ಪಾರುವಿಗೆ ಕಂಡಿದ್ದು ವೈವಾಹಿಕ ವೆಬ್ಸೈಟ್.

"ಮದುವೆಗಾಗಿ ಗಂಡು ಹುಡುಕುತ್ತಿದ್ದೀನಿ, ಅಮ್ಮ ಹೇಳಿದಾಳೆ ನಾನೆ ಇದರಲ್ಲಿ ಹುಡುಕಬೇಕಂತೆ, ತನ್ನ ಆಯ್ಕೆ ಬಗ್ಗೆ ಅವಳಿಗೆ ನಂಬಿಕೆ ಇಲ್ಲ. ಒಮ್ಮೆ ತಪ್ಪು ಮಾಡಿದಾಳಲ್ಲ, ನಿಮ್ಮ ಮಗನನ್ನು ಆರಿಸಿ". ಮೊಮ್ಮಗಳ ಮಾತು ಕೇಳಿ ಮುಕ್ತವಾಗಿ ನಕ್ಕಳು ಅಜ್ಜಿ. ಮೂರು ಹೊತ್ತು ಟೀವಿ ವಾರ್ತೆ ನೋಡುವ, ದಿನ ಪತ್ರಿಕೆ ಹಿಡಿದು ಕೂರುವ, ಆಫೀಸಿನಿಂದ ಬಂದ ಮೇಲೆ ಮೊಬೈಲ್ ಆಗಲಿ, ಲಾಪ್ಟಾಪ್ ಆಗಲಿ ಮುಟ್ಟದ, ಮನೆಯಲ್ಲಿ ಅನ್ನ ಸಾರು ತಿನ್ನುವ, ಚಾಟ್,

ಚ್ಯಾಟ್ ಎರಡನ್ನೂ ಅರಿಯದ ಮೊದ್ದು ಮಗ ತನ್ನ ಮುದ್ದಿನ ಮಾಡ್ರನ್ ಸೊಸೆಗೆ ಖಂಡಿತಾ ತಕ್ಕವನಲ್ಲ ಎಂದು ಆಕೆ ನಿರ್ಧರಿಸಿಯಾಗಿತ್ತು.

ಜಾಣ ಸೊಸೆಯ ಜಾಣ ನಿರ್ಧಾರ ಪಾರುಗೆ ಬಹಳವೇ ಹಿಡಿಸಿತು. "ನಿನ್ನ ಬಗ್ಗೆ ಏನು ಮಾಹಿತಿ ಕೊಟ್ಟಿದೀಯಾ?" ಅಜ್ಜಿಯ ಮಾತಿಗೆ ನಕ್ಕು ತನ್ನ ಬಯೋಡೇಟಾ ತೋರಿಸಿದಳು ಪಿಂಕ್ಸ್.

"ರಾಹು ಕೇತು ಅಂದರೆ ಅಪ್ಪ ಅಮ್ಮನ ಜತೆ ಇರದ ಹುಡುಗ ಬೇಕಾಗಿದೆ. ಅಪ್ಪ ಅಮ್ಮ ಜತೆಗೆ ಇದ್ದರೂ ಅವರಷ್ಟಕ್ಕೆ ಅವರು ಇರಬೇಕು. ಮನೆಯಲ್ಲಿ ವೈಫೈ ಬಿಲ್ಲು ನಾನೇ ಬೇಕಾದರೂ ಕಟ್ಟುವೆ. ಆದರೆ ಮುಖಪುಟದಲ್ಲಿ ಗೆಳೆತನ ಬಯಸುವುದು, ಇನ್ಸ್ಟಾ ಹಿಂಬಾಲಿಸುವುದು ಮಾಡಬಾರದು. ಇನ್ನು ಹುಡುಗ– ಕನಿಷ್ಟ ಪಕ್ಷ ಬಿಇ ಓದಿರಬೇಕು. ಒಂದೆರಡು ಸಲಕ್ಕಿಂತ ಜಾಸ್ತಿ ಡುಂಕಿ ಹೊಡೆದಿರಬಾರದು. ಏಕೆಂದರೆ ನಾನೆ ಮೂರು ಬ್ಯಾಕ್ ಪೇಪರ್ ಇಟ್ಟುಕೊಂಡು ಪಾಸಾಗಿರುವೆ. 50,000 ಸಂಬಳವಾದರೂ ಇರಬೇಕು. ಮೋಟರು ಬೈಕ್ ಇದ್ದವರಿಗೆ ಆದ್ಯತೆ. ಅಡುಗೆ ಕೆಲಸ ಕಲಿತಿದ್ದರೆ ಪ್ಲಸ್ ಪಾಯಿಂಟ್. ಇಲ್ಲವಾದರೆ ಅಡುಗೆಯವರಿಗೆ ಸಂಬಳ ಕೊಡಲು ತಯಾರಿರಬೇಕು. ಕಾಕ್ಟೇಲ್ ಬೆರೆಸಲು ಕಡ್ಡಾಯವಾಗಿ ಬರಬೇಕು. ಮಂಗಳ ಸೂತ್ರ ಹಾಕಿಕೊ, ಸೀರೆ ಉಟ್ಟುಕೊ, ಇವೆಲ್ಲಾ ಸಲ್ಲದು. ನಮ್ಮ ತಾಯಿಯ ಬಳಿ ಇರುವುದೇ 10 ಸೀರೆ. ಮಿಕ್ಕವೆಲ್ಲಾ ಜೀನ್ಸ್, ಪ್ಯಾಂಟ್, ಚೂಡಿದಾರ್ ಇತ್ಯಾದಿ. ಸೀರೆ ಉಡಲು ಅವರಿಗೇ ಸರಿಯಾಗಿ ಬರುವುದಿಲ್ಲ. ಆದ್ದರಿಂದಲೇ ಏನೊ, ನಮ್ಮಪ್ಪನ ರಿಂಗ್ ಟೋನ್ "ಹೆಣ್ಣು ಎಂದರೆ ಹೀಗಿರಬೇಕು" ಎಂಬ ಹಾಡು. ಹಾ, ಪಬ್, ಬಾರ್ ಮುಂತಾದುವುಗಳಿಗೆ ಭೇಟಿ ಇತ್ತರೂ ಗಾಡಿ ಚಲಾಯಿಸಲಾಗದಷ್ಟು ಕುಡಿಯಬಾರದು. ಗೆಳೆಯ ಗೆಳತಿಯರಿದ್ದರೂ ಜಾಸ್ತಿ ಹಚ್ಚಿಕೊಂಡಿರಬಾರದು. ಇನ್ನು ಮಿಕ್ಕ ಅರ್ಹತೆಗಳನ್ನು ಮುಖಮುಖಿಯಾಗಿ ತಿಳಿಸಲಾಗುವುದು."

ಪಾರು ಮೆಚ್ಚುಗೆಯಿಂದ ನುಡಿದಳು " ಅಯ್ಯೊ ಹುಡುಗಿ, ನನ್ನ ಮದುವೆ ಟೈಮಿನಲ್ಲಿ ನೀ ಇರಬಾರದಿತ್ತಾ, ನನಗೆ ಸಲಹೆ ಕೊಟ್ಟಿದ್ದರೆ ಎಷ್ಟು ಸೊಗಸಾಗಿರುತ್ತಿತ್ತು! ಅಂದ ಹಾಗೆ ನಿನಗಿಷ್ಟವಾದ ಹೋಟೆಲ್ ಪರ್ಯಟಣೆ, ಸಿನೇಮಾ ವೀಕ್ಷಣೆ, ಮಾಲ್ ಶಾಪಿಂಗ್, ಇದೆಲ್ಲದರೆ ಬಗ್ಗೆ ಪ್ರಸ್ತಾಪವೇ ಇಲ್ಲವಲ್ಲ!

ಮೊಮ್ಮಗಳು ಎದ್ದು ಮಿನಿ ಸ್ಕರ್ಟ್ ಸರಿಪಡಿಸಿಕೊಂಡಳು.

"ಅದೆಲ್ಲ ಸಿಂಪಲ್ ಪಾರು, ಮದುವೆಯಾದ ಮೇಲೆ ಅವನನ್ನು ಮೂಗುದಾರ ಹಾಕಿ ಎಳಕೊಂಡು ಹೋಗುವುದು ನಾ ತಾನೆ, ಅವೆಲ್ಲ ಮ್ಯಾನೇಜ್ ಮಾಡುವೆ ಬಿಡು". ಅಜ್ಜಿ ಮೊಮ್ಮಗಳ ಸಂಭಾಷಣೆ ಕೇಳಿ ಅಲ್ಲಿಯೇ ಪೇಪರ್ ಓದುತ್ತಿದ್ದ ಅಪ್ಪ, ಭಾಗವತ ಓದುತ್ತಿದ್ದ ಅಜ್ಜ, ಬೆವರೊರಿಸಿಕೊಂಡರು!

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಆ

- ✓ ತಂದೆ ಮಗನಿಗೆ: ನಡೆಯುವಾಗ ಹುಷಾರು ಮಗ.

  ಮಗ: ನೀನು ಹುಷಾರಾಗಿರು ಅಪ್ಪಾ. ಏಕೆಂದರೆ ನಿನ್ನ ಹೆಜ್ಜೆಯನ್ನೇ ನಾನು ಅನುಸರಿಸುವುದು.
- ✓ ವಿರೋಧಿಯಾಗಿರು ಆದರೆ ವೈರಿಯಾಗಿರಬೇಡ.
- ✓ ಸಂತೋಷವೆಂದರೆ ಸಮಸ್ಯೆಗಳಿಲ್ಲದಿರುವುದಲ್ಲ ಅವುಗಳನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿರುವುದು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ✓ ನೊಬಡಿ ಕೆನ್ ಗೊ ಬ್ಯಾಕ್ ಅಂಡ್ ಸ್ಟಾರ್ಟ್ ಎ ನ್ಯೂ ಬಿಗಿನಿಂಗ್ ಬಟ್ ಎನಿಒನ್ ಕೆನ್ ಸ್ಟಾರ್ಟ್ ಟುಡೆ ಅಂಡ್ ಮೇಕ್ ಎ ನ್ಯೂ ಎಂಡಿಂಗ್.
- ✓ ಆತ್ಮ ತಿಳಿಯುವ ವಸ್ತುವಲ್ಲ. ತಿಳುವಳಿಕೆಯೇ ಆತ್ಮ.
- ✓ ಶೌಚಾಲಯದಲ್ಲಿ ನೀರಿನ ವ್ಯವಸ್ಥೆ ಸರಿ ಇದೆ ಎಂದರೆ ವಾಸ್ತು ಸರಿ ಇದೆ ಎಂದೇ ಅರ್ಥ.
- ✓ ಈಗೀಗ ಮನೆಗಳು ದೊಡ್ಡದಾಗುತ್ತಿವೆ ಆದರೆ ಸಂಸಾರಗಳು ಕಿರಿದಾಗುತ್ತಿವೆ.
- ✓ ಜಾಹೀರಾತು: ಆರ್ಟ್ ಆಫ್ ಮೇಕಿಂಗ್ ಪೀಪಲ್ ಬಯ್ ವಿಥೌಂಟ್ ನೋಯಿಂಗ್ ವೈ.
- ✓ ವಾತ್ಸಲ್ಯವಿಲ್ಲದೆ ಬದುಕಬಹುದು ಆದರೆ ನೀರಿಲ್ಲದೆ ಸಾಧ್ಯವಿಲ್ಲ.
- ✓ ಪ್ರಾರ್ಥನೆ: ದೇವರೊಡನೆ ಸಂಭಾಷಿಸುವುದು. ಧ್ಯಾನ: ದೇವರನ್ನು ಕೇಳಿಸಿಕೊಳ್ಳುವುದು.
- ✓ ವಿ ಬಾಯಿಲ್ ಅಟ್ ಡಿಫರೆಂಟ್ ಡಿಗ್ರೀಸ್.
- ✓ ಆಟದಲ್ಲಿ ಎಲ್ಲವೂ ಕಷ್ಟವಾಗಲಿಕ್ಕೆ ಕಾರಣ ವಿರೋಧಿ ತಂಡ ಇರುವುದು.
- ✓ ದೇವರು ನಮಗೆ ಅನೇಕ ಧರ್ಮಗಳನ್ನು ನೀಡಿದ್ದರೂ ಬದುಕಲು ಕೊಟ್ಟಿರುವ ಭೂಮಿ ಒಂದೇ.
- ✓ ಸಮ್ ಟೈಂಸ್ ಯು ವಿನ್ ಸಮ್ ಟೈಂಸ್ ಯು ಲರ್ನ್
- ✓ ಒಳ್ಳೆಯ ಛತ್ರಿಗಾಗಿ ಪ್ರಾರ್ಥಿಸು, ಸಣ್ಣ ಮಳೆಗಲ್ಲ.
- ✓ ಸೂರ್ಯನಂತೆ ಬೆಳಗಬೇಕಿದ್ದರೆ ಸೂರ್ಯನಂತೆ ಉರಿಯಲು ಮೊದಲು ಕಲಿ.
- ✓ ವಿ ಆರ್ ಲೆಸ್ ವೆನ್ ವಿ ಡೋಂಟ್ ಇನ್‌ಕ್ಲೂಡ್ ಎವೆರಿಒನ್.

**RAMAIAH**
**Indic Specialty Ayurveda**

**RESTORATION HOSPITAL**

# Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para-Surgical Procedures



Proud to Announce
**NABH Accrediation**

Under the Leadership of
**Prof. Dr. G.G. Gangadharan**

# World Renowned Doctors



First Franchise
Bannerghatta




First Joint Venture
Penang, Malaysia




First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com

# ಭಾರತದ ಮೊಟ್ಟಮೊದಲ ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ



















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೆ?

**ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.**

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA ON MODERN METHODS OF ANALYSIS FOR FOOD / DRUG / ENVIRONMENT FOR GRADUATES & POST-GRADUATES IN SCIENCE, ENGG, PHARMACY, BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!

ಕಾಮನ್ ರೂಮ್ ಕಹಾನಿ

# ಹೊಟ್ಟೆ ಪೊಲೀಸರು!

**• ಗಣೇಶ ಹೆಗ್ಗಡೆ**

**ಎಚ್ ಸಿ ಮಡದಿ ಮಂಗಳಮ್ಮನ ಎಚ್ಚರಿಕೆ ಪತ್ರ**

ಆಷಾಢದ ಆ ಶನಿವಾರ ಎಂದಿನಂತೆ ನಾವು ಕಾಮನ್ ರೂಮು ಪ್ರವೇಶಿಸಿದಾಗ, ನಮಗಿಂತ ಮೊದಲೇ ರಾಯರು ಸಭಾಭವನದ ಅಧ್ಯಕ್ಷ ಪೀಠವನ್ನಲಂಕರಿಸಿ ಕುಳಿತಿದ್ದುದು ಅಚ್ಚರಿಯ ವಿಷಯವಾಗಿತ್ತು.

'ವೆಲ್‌ಕಮ್ ಯಂಗ್ ಬಾಯ್ಸ್' ಎಂದರು ರಾಯರು. ನಾವೂ ಅವರಿಗೆ ವಿಷ್ ಮಾಡಿ ನಮ್ಮ ನಮ್ಮ ಆಸನದಲ್ಲಿ ಸೀರಿಯಸ್ಸಾಗಿ ಕುಳಿತುಕೊಂಡೆವು. ರಾಯರು ತಮ್ಮ ಜೇಬಿನಲ್ಲಿ ಮಡಚಿಟ್ಟಿಕೊಂಡಿದ್ದ ಚೀಟಿಯನ್ನು ತೆಗೆದು, ನಮ್ಮತ್ತ ತೋರಿಸಿ, 'ದಿಸ್ ಲೆಟರ್ ಈಸ್ ಫ್ರಮ್ ಎ ಹಂಬಲ್ ವುಮನ್, ಷಲ್ ಐ ರೀಡ್?' ಎಂದು ಕೇಳಿದರು.

'ಸರ್ಟನ್ಲಿ ಸರ್' ಎಂದೆವು.

'ಮಾನ್ಯ ಎ.ಡಿ.ಜಿ.ಪಿ. ಸೂರ್ಯನಾರಾಯಣರಾಯರ ಪಾದಾರವಿಂದಗಳಿಗೆ, ತಮ್ಮ ಇಲಾಖೆಯ ಕಲ್ಲೇಶ್ವರಂ ಸಬ್ ಡಿವಿಜನ್ನಿನ ಟ್ರಾಫಿಕ್ ವಿಭಾಗದಲ್ಲಿ ಹೆಚ್. ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಸುಬ್ಬಣ್ಣನವರ ಮಡದಿ ಮಂಗಳಮ್ಮನು ಮಾಡುವ ಸಾಷ್ಟಾಂಗ ನಮಸ್ಕಾರಗಳು.

ಮಹಾಸ್ವಾಮಿ, ಇತ್ತೀಚೆಗೆ ಒಂದು ಸುತ್ತೋಲೆಯನ್ನು ತಾವು ಹೊರಡಿಸಿರುವುದು ಸರಿಯಷ್ಟೆ. ಇದರನುಸಾರ ಇಲಾಖೆಯ ಸುಪರ್ದಿಗೆ ಬರುವ ಎಲ್ಲಾ ಪೊಲೀಸು ಸಿಬ್ಬಂದಿಗೂ ತಮ್ಮ ಹೊಟ್ಟೆಯ ಸುತ್ತಳತೆ ಹಾಗೂ ತೂಕವನ್ನು ಇಳಿಸಿಕೊಳ್ಳಬೇಕೆಂದು ನಿರ್ದೇಶಿಸಿರುವುದೂ ತತ್ಸಂಬಂಧ ಪಾಲನೆ ಮಾಡದಿರುವ ಸಿಬ್ಬಂದಿ ವರ್ಗದ ಮೇಲೆ ಕಠಿಣ ಇಲಾಖಾ ಕ್ರಮವನ್ನು ತೆಗೆದುಕೊಳ್ಳುವುದಾಗಿ ಎಚ್ಚರಿಸಿರುವುದು ಮೇಲುನೋಟಕ್ಕೆ ಸ್ವಾಗತಾರ್ಹ ವಿಷಯ. ಇದು ಆರೋಗ್ಯದ ದೃಷ್ಟಿಯಿಂದ ಸಂತಸದ ವಿಚಾರವಾದರೂ, ಈ ಸುತ್ತೋಲೆ ಹೊರಡಿಸುವ ಮುನ್ನ ಕೆಲವೊಂದು ಪೂರಕ ವಿಚಾರಗಳನ್ನು ತಾವು ಗಮನಕ್ಕೇ ತೆಗೆದುಕೊಳ್ಳದಿರುವುದು ನಿಜಕ್ಕೂ ಖೇದದ ಸಂಗತಿ.

ಮಹಾಸ್ವಾಮಿ, ತಮ್ಮ ಇಲಾಖೆಯಲ್ಲಿ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಮಹಿಳಾ ಸಿಬ್ಬಂದಿಗಳೂ ಹೆಚ್ಚಿನ ಸಂಖ್ಯೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸರಿಯಷ್ಟೆ. ಅವರಿಗೂ ತಮ್ಮ ಈ ಸುತ್ತೋಲೆ ಅನ್ವಯವಾಗುವುದಾದರೆ ಎಂಥಹ ಆಭಾಸವಾದೀತು ಎಂದೆಚ್ಚರಿಸುವ ಉದ್ದೇಶವೇ ಈ ಪತ್ರದ್ದು. ಯಾಕೆಂದರೆ ಮೊನ್ನೆ ತಾನೆ ಒಂದು ಪೊಲೀಸು ಠಾಣೆಯಲ್ಲಿ

ಮಹಿಳಾ ಸಿಬ್ಬಂದಿಯೊಬ್ಬರಿಗೆ ಠಾಣೆಯಲ್ಲೇ ಸೀಮಂತ ಮಾಡಿ, ಎಲ್ಲಾ ಇತರ ಸಿಬ್ಬಂದಿಗಳೂ ಉಡುಗೊರೆ ಕೊಟ್ಟು ಸತ್ಕರಿಸಿದ್ದ ವಿಷಯ ಪತ್ರಿಕೆ ಹಾಗೂ ಟಿ. ವಿ. ಮಾಧ್ಯಮದಲ್ಲಿ ನೇರ ಪ್ರಸಾರವಾಗಿ, ಇಲಾಖೆ ರಾಜ್ಯದ ಜನತೆಯ ಪ್ರಶಂಸೆಗೆ ಪಾತ್ರವಾಗಿರುವುದು ಅತಿಶಯೋಕ್ತಿಯೇನಲ್ಲ. ಆದ್ದರಿಂದ ತಮ್ಮ ಸುತ್ತೋಲೆ ಮಹಿಳಾ ಸಿಬ್ಬಂದಿಗಳಿಗೂ ಅನ್ವಯವಾದರೆ, ಅವರ ತಾಯ್ತನಕ್ಕೆ ಎಂಥಹ ಅಪಚಾರವಾದೀತು! ಆದ್ದರಿಂದ, ಖಾವಂದರು ಈ ಸುತ್ತೋಲೆಯಲ್ಲಿ ಕೆಲವು ಮಾರ್ಪಾಟುಗಳನ್ನು ತರುವುದು ಒಳಿತು ಎಂಬ ಸಲಹೆ ನನ್ನದು.

ಮಹಾಸ್ವಾಮಿ, ತಮ್ಮ ಸುತ್ತೋಲೆ ಓದಿ ಆಘಾತಗೊಂಡಿರುವ ಬಹುಮಂದಿ ಪೊಲೀಸು ಸಿಬ್ಬಂದಿ ವರ್ಗದಲ್ಲಿ ನನ್ನ ಪೂಜ್ಯಪತಿ ಸುಬ್ಬಣ್ಣನವರೂ ಒಬ್ಬರು. ನಮಗೆ ಮದುವೆಯಾಗಿ ಹತ್ತು ವರ್ಷದ ನಂತರ ಒಂದು ಮಗು ಹುಟ್ಟಿದ್ದು, ಈಗ ಅದಕ್ಕೆ ಒಂದು ವರ್ಷ. ಪ್ರತಿ ದಿವಸವೂ ನಮ್ಮೆಜಮಾನರು ಟ್ರಾಫಿಕ್ ಡ್ಯೂಟಿ ಮುಗಿಸಿ ಬಂದು ರಾತ್ರಿಯ ಹೊತ್ತು ಮಗುವನ್ನು ತಮ್ಮ ತುಂಬು ಹೊಟ್ಟೆಯ ಮೇಲೆ ಮಲಗಿಸಿಕೊಂಡು ಮಗುವನ್ನು ಆಟವಾಡಿಸುವ ಪರಿಪಾಠವನ್ನಿಟ್ಟುಕೊಂಡಿರುತ್ತಾರೆ. ಮಗುವೂ ಇವರ ಹೊಟ್ಟೆಯನ್ನು ತುಂಬಾ ಹಚ್ಚಿಕೊಂಡಿದೆ. ಇಂಥಹ ವಾತ್ಸಲ್ಯದ ಸಮಯದಲ್ಲಿ ತಮ್ಮ ಸುತ್ತೋಲೆಯ ಅಧಿಸೂಚನೆಯಂತೆ ಹೊಟ್ಟೆಯ ಸುತ್ತಳತೆಯನ್ನು ಕಡಿಮೆ ಮಾಡಿಕೊಳ್ಳುವುದು ಎಷ್ಟರ ಮಟ್ಟಿಗೆ ಸೂಕ್ತ? ಮಹಾಸ್ವಾಮಿ, ಎಲ್ಲರೂ ಬದುಕುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎಂಬ ಪ್ರಸಿದ್ಧ ದಾಸ ಚಿಂತನೆಗೆ ತಮ್ಮ ಈ ನಿರ್ದೇಶನ ಕಪ್ಪು ಚುಕ್ಕೆಯಿಟ್ಟಂತಾಗುವುದಿಲ್ಲವೇ? ಈ ವಿಚಾರದ ಬಗ್ಗೆ ಹೆಚ್ಚು ಪರಾಮರ್ಶೆ ಅವಶ್ಯವಲ್ಲವೇ?

ಮಹಾಸ್ವಾಮಿ, ಎಪ್ಪತ್ತು-ಎಂಭತ್ತರ ದಶಕದಲ್ಲಿ ಮೆಜೆಸ್ಟಿಕ್ ಪ್ರದೇಶದ ಕೆ. ಜಿ. ರಸ್ತೆಯ ಮೈಸೂರು ಬ್ಯಾಂಕ್ ಚೌಕದ ಬಳಿ, ಅತಿ ದಪ್ಪ ಹಾಗೂ ಉದ್ದದ ಮೀಸೆ ಹೊತ್ತ ಟ್ರಾಫಿಕ್ ಪೊಲೀಸರೊಬ್ಬರು ತಮ್ಮ ಕರ್ತವ್ಯವನ್ನು ನಿರ್ವಹಿಸುವಾಗ, ಅವರನ್ನು ನೋಡಿ ಆನಂದಿಸುವುದೇ ಎಷ್ಟು ಚೆಂದವಿತ್ತು. ಇವರಿಗೆ ಇಲಾಖಾ ಮೇಲಧಿಕಾರಿಗಳು, ಮೀಸೆ ಅಲೋಯೆನ್ಸ್ ಅನ್ನು ಮಂಜೂರು ಮಾಡಿ, ಜನತೆಯ ಮೆಚ್ಚುಗೆಗೆ ಪಾತ್ರರಾಗಿದ್ದುದು ಕಡತಗಳಲ್ಲಿ ದಾಖಲಾಗಿಲ್ಲವೆ? ಅಂತೆಯೆ, ತೂಕ ಹಾಗು ಹೊಟ್ಟೆಯ ಸುತ್ತಳತೆಯನ್ನು ಕಡಿಮೆ ಮಾಡಿಕೊಳ್ಳಲೇ ಆಗದ ಪೊಲೀಸರನ್ನು ಶಿಕ್ಷಿಸುವ ಬದಲು, ಅವರ ಅಗತ್ಯ ಸೇವೆಯನ್ನು ಬೇರೊಂದು ರೀತಿ ಸದುಪಯೋಗ ಪಡಿಸಿಕೊಳ್ಳಲು ಇಲಾಖೆಗೆ ಅವಕಾಶವಿಲ್ಲವೇ? ಇತ್ತೀಚೆಗೆ ಲಾಕಪ್ ಡೆತ್‌ನಂತಹ ಘೋರ ಘಟನೆಗಳು ಆಗಿಂದಾಗ್ಗೆ ಮರುಕಳಿಸಿ ಇಲಾಖೆಗೆ ಅದೆಷ್ಟು ಕೆಟ್ಟ ಹೆಸರು ಬಂದಿದೆ. ಸತ್ಯ ಬಾಯ್ಬಿಡಿಸಲು ಠಾಣೆಗಳಲ್ಲಿ ಅನುಸರಿಸುವ ಕ್ರಮ ನಿಜಕ್ಕೂ ಭಯಭೀತ ವಾದದ್ದು. ಇಂಥಹ ಸಂದರ್ಭಗಳಲ್ಲಿ, ತೂಕ ಹಾಗೂ ಡೊಳ್ಳು ಹೊಟ್ಟೆಯ ಪೊಲೀಸರ ನೆರವು ಪಡೆದು ಒಂದರ್ಧ ತಾಸು ಅಪರಾಧಿಯ ಬೆನ್ನಿನ ಮೇಲೆ ಶನಿ ಎಗರಿಕೊಂಡಂತೆ ಕುಳ್ಳಿರಿಸಿದರೆ ಎಂಥಹ ಕುಪ್ರಸಿದ್ಧ ಖೈದಿಯೂ ಸತ್ಯವನ್ನು ಬಾಯ್ಬಿಟ್ಟಾನು! ಇಂಥಹ ಪೊಲೀಸು ಸಿಬ್ಬಂದಿಗಳಿಗೆ 'ಸ್ಟಮಕ್ ಅಲೋಯನ್ಸ್' ಎಂಬ ವಿಶೇಷ ಭತ್ಯೆಯನ್ನು ಮಂಜೂರು ಮಾಡಲು ಗೃಹ

ಇಲಾಖೆಗೆ ಶಿಫಾರಸು ಮಾಡಬಹುದಲ್ಲವೆ?

ಮಹಾಸ್ವಾಮಿ, ಈ ಸಮಾಜದಲ್ಲಿ ಒಂದು ತಪ್ಪು ಕಲ್ಪನೆ ಸಹಜವಾಗಿ ಜನ ಸಾಮಾನ್ಯರಲ್ಲಿದೆ. ಅದೇನೆಂದರೆ, ದಪ್ಪ ಹೊಟ್ಟೆಯಿರುವವರು ಜಾಸ್ತಿ ತಿನ್ನುತ್ತಾರೆ– ಕೃಶಾಂಗಿಗಳು ಕಡಿಮೆ ತಿನ್ನುತ್ತಾರೆ ಎಂಬ ಕಲ್ಪನೆ. ಸ್ವಾಮಿ, ಇಲ್ಲಿ 'ತಿನ್ನುವುದು' ಎನ್ನುವುದಕ್ಕೆ ತಮ್ಮ ಇಲಾಖೆಯಲ್ಲಿ ಬೇರೆಯೆ ಅರ್ಥೈಸಲಾಗಿದೆ. ಆದರೆ ಈ ಪದದ ಉದ್ದೇಶ ಇದಲ್ಲ. ತಾವು ತಪ್ಪು ತಿಳಿದುಕೊಳ್ಳಬಾರದು. ಆದರೆ ಈ ಕಲ್ಪನೆ ವ್ಯತಿರಿಕ್ತ ಎನ್ನುವುದು ಅನುಭವಸ್ಥರ ದೃಢ ನಂಬಿಕೆ. ಸುಮಾರು ಐದು ವರ್ಷದಿಂದಲೂ ಟ್ರಾಫಿಕ್ ಹೆಚ್. ಸಿ. ಆಗಿರುವ ನನ್ನ ಪೂಜ್ಯ ಪತಿಯವರು ಒಂದು ದಿನವೂ ಫುಟ್‌ಪಾತ್ ವ್ಯಾಪಾರಿಗಳಿಂದಾಗಲೀ, ತಳ್ಳುವ ಗಾಡಿಗಳಿಂದಾಗಲಿ ಆಹಾರ ಪದಾರ್ಥಗಳನ್ನು ಉದರೀ ತಂದಿಲ್ಲ. ಅವರ ತುಂಬು ಹೊಟ್ಟೆ ಹಾಗು ತುಂಬು ಹೃದಯ ಇಂಥಹ ಕ್ಷುಲ್ಲಕ ವಿಚಾರಗಳಿಗೆ ಕಿಂಚಿತ್ತೂ ಬೆಂಬಲ ಕೊಟ್ಟಿಲ್ಲ. ಅದೇ ಇವರ ಕೊಲೀಗು ಕೆಂಡಗಣ್ಣ ಸ್ವಾಮಿಯವರು ಕೃಶಾಂಗಿಯಾಗಿದ್ದು, ಒಂದು ದಿವಸವೂ ಖಾಲಿ ಕೈಯಲ್ಲಿ ಮನೆಗೆ ಬಂದಿರುವುದಿಲ್ಲ. ಸ್ವಾಮಿ, ತಾವೇ ತಮ್ಮ ಮಹಜರು ಭಾಷೆಯಂತೆ ಅಜಮಾಯಿಸಿ ನೋಡಿ, ತೂಕ ಮತ್ತು ಡೊಳ್ಳು ಹೊಟ್ಟೆಯ ಸಿಬ್ಬಂದಿ ನಿಜಕ್ಕೂ ಇಲಾಖೆಗೆ ಹೆಸರು ತರುವಂಥಹವರು. ಖಂಡಿತಾ ಕಳಂಕ ತರುವವರಲ್ಲ. ಆದ್ದರಿಂದ ಖಾವಂದರು ತಮ್ಮ ಮನಸ್ಸು ಬದಲಾಯಿಸಿ ಹಿಂದೆ ಹೊರಡಿಸಿರುವ ಸುತ್ತೋಲೆಯನ್ನು ಶೀಘ್ರವೇ ಹಿಂಪಡೆಯುವರೆಂದು ನಾವು ನಂಬೋಣವೇ?

ಇಷ್ಟಾದರೂ ತಮ್ಮ ಸುತ್ತೋಲೆ ಬಂದ ಬಳಿಕ, ನನ್ನ ಪೂಜ್ಯ ಪತಿಯವರು ಮೊನ್ನೆ ನಡೆದ ಒಂದು ಘಟನೆಯಲ್ಲಿ ಸಾರ್ವಜನಿಕರ ಪ್ರಶಂಸೆಗೂ, ಇಲಾಖಾಧಿಕಾರಿಗಳ ಬಹುಮಾನಕ್ಕೂ ಭಾಜನರಾದರು ಎಂದು ತಿಳಿಸಿದರೆ ನಂಬಲು ಕಷ್ಟವಲ್ಲವೆ? ತಮ್ಮ ಸುತ್ತೋಲೆಗೆ ಹೆದರಿ ನನ್ನೆಜಮಾನರು ಒಂದು ಬೆಳಿಗ್ಗೆ ಐದಕ್ಕೇ ಎದ್ದು, ಮಫ್ತಿಯಲ್ಲಿ ಮನೆಯ ಮುಂದಿನ ರಸ್ತೆಯಲ್ಲಿ ಓಡುವ ಅಭ್ಯಾಸದಲ್ಲಿ ನಿರತರಾಗಿದ್ದಾಗ, ಸರಗಳ್ಳನೊಬ್ಬ ತನ್ನನ್ನು ಹಿಡಿಯಲು ಇವರೇ ಖುದ್ದಾಗಿ ಅಟ್ಟಿಸಿಕೊಂಡು ಬರುತ್ತಿದ್ದಾರೆ ಎಂದು ತಪ್ಪು ಭ್ರಮಿಸಿ, ಓಟ ಕೀಳಲು ಪ್ರಯತ್ನಿಸಿ ವಿಫಲನಾಗಿ ಜಾಗಿಂಗ್ ಮಾಡುತ್ತಿದ್ದ ಸಾರ್ವಜನಿಕರ ಕೈಯಲ್ಲಿ ಸಿಕ್ಕಿಹಾಕಿಕೊಂಡ ವಿಷಯ ಬೆಳಗ್ಗಿನಿಂದ ಮಧ್ಯಾಹ್ನದವರೆಗೂ ಟಿ. ವಿ.ಯಲ್ಲಿ ಪ್ರಸಾರವಾದುದು ಸರಿಯಷ್ಟೆ. ಮಹಾಸ್ವಾಮಿ ಬೆಳಗಿನ ಝಾವದ ಸರಗಳ್ಳತನದ ಇಳಿ ಮುಖಕ್ಕೆ ನಮ್ಮೆಜಮಾನರಂಥಹವರದ್ದು ಒಂದು ಅಳಿಲು ಕಾಣಿಕೆ ಎಂದರೆ ಅತಿಶಯೋಕ್ತಿ ಅಲ್ಲ, ಅಲ್ಲವೇ?

ಮಹಾಸ್ವಾಮಿ, ಕೊನೆಯದಾಗಿ ನನ್ನ ಪೂಜ್ಯ ಪತಿಯವರಿಗೆ ಬ್ಯಾಂಡ್ ಬಾರಿಸುವ ಕಲಾಸಕ್ತಿ ಇದ್ದು, ತಮ್ಮ ಇಲಾಖೆಯಲ್ಲಿ ಒಂದು ಬ್ಯಾಂಡ್ ಡಿವಿಜನ್ನೇ ಇದೆ ಎಂದು ಕೇಳಲ್ಪಟ್ಟಿರುತ್ತೇನೆ. ಜಗತ್ ಪ್ರಸಿದ್ಧ ದಸರೆಯ ವೇಳೆ ಮೈಸೂರಿನಲ್ಲಿ ಆಯುಧ ಪೂಜೆಯ ದಿನದಂದು ತಮ್ಮ ಇಲಾಖೆ ನಡೆಸಿಕೊಡುವ 'ಪೊಲೀಸ್ ಬ್ಯಾಂಡ್' ಕಾರ್ಯಕ್ರಮ ಹೃನ್ಮನ ತಣಿಸುವಂಥಾದ್ದು. ಈ ವೇಳೆ ಕೆಲವು ಕೃಶಾಂಗಿಗಳು

ಬ್ಯಾಂಡನ್ನು ತಮ್ಮ ಹೊಟ್ಟೆಯ ಮೇಲಿರಿಸಿಕೊಳ್ಳುವುದಕ್ಕೆ ತುಂಬಾ ಪ್ರಯಾಸ ಪಡುವುದನ್ನು ನಾನು ಗಮನಿಸಿರುತ್ತೇನೆ. ಆದ್ದರಿಂದ, ಡೊಳ್ಳು ಹೊಟ್ಟೆಯ ನನ್ನ ಪೂಜ್ಯ ಪತಿಯಂಥಹವರನ್ನು ಬ್ಯಾಂಡ್ ಡಿವಿಜನ್ನಿಗೆ ಸೇರಿಸಿಕೊಂಡರೆ ಸುಲಭವಾಗಿ ಬ್ಯಾಂಡನ್ನು ತಮ್ಮ ಹೊಟ್ಟೆಯ ಮೇಲೆ ಜಾರದಂತೆ ಇಟ್ಟುಕೊಂಡು ಕಲಾರಸಿಕರಿಗೆ ರಸದೌತಣವನ್ನು ಇವರು ನೀಡಬಹುದು. ಈ ಬ್ಯಾಂಡು ಡಿವಿಜನ್ನಿನವರನ್ನು ಪ್ರತಿವಾರ ನಿಮ್ಮ ವಿವಿಧ ಇಲಾಖೆಗಳ ಮುಂದೆ ಬ್ಯಾಂಡ್ ನುಡಿಸಲು ನಿಯೋಜಿಸಿದರೆ ಆಯಾ ಇಲಾಖೆಗಳಲ್ಲಿ ಸೇರಿಕೊಂಡಿರುವ ಬ್ಯಾಂಡಿ ಕೂಟುಗಳು ಹೇಳ ಹೆಸರಿಲ್ಲದಂತೆ ಮಾಯವಾಗಿ ತಮ್ಮ ಇಲಾಖೆಗೆ ವಳ್ಳೇ ಹೆಸರು ಬರುವುದು ನೂರಕ್ಕೆ ನೂರರಷ್ಟು ಸತ್ಯ.

ಆದ್ದರಿಂದ ಖಾವಂದರು ವಿಶದೀಕರಿಸಿ ಬರೆದಿರುವ ಮೇಲಿನ ಪ್ರಸಂಗಗಳನ್ನೆಲ್ಲಾ ಒಮ್ಮೆ ಕ್ರೋಢೀಕರಿಸಿ ಇಲಾಖಾ ಹಿರಿಯ ಅಧಿಕಾರಿಗಳೊಡನೆ ಈ ಬಗ್ಗೆ ಸೂಕ್ತ ಚರ್ಚಿಸಿ, ಮೇಲಿನ ಸುತ್ತೋಲೆಯನ್ನು ಅತಿ ಶೀಘ್ರದಲ್ಲಿ ಹಿಂಪಡೆಯಬಹುದೆಂದು ನಾವು ಆಶಿಸೋಣವೇ?

ತಮ್ಮ ನಂಬುಗೆಯ

ಮಂಗಳಮ್ಮ

ಪತ್ರ ಓದಿ ಮುಗಿಸಿದ ರಾಯರು ನಮ್ಮತ್ತ ಅನುಕಂಪದ ದೃಷ್ಟಿ ಬೀರಿ, ಸಭೆ ಬರಖಾಸ್ತು ಮಾಡೋಣವೇ? ಎಂದರು.

'ಯೆಸ್ ಸಾರ್' ಎಂದೆವು.

* * *

ದಾರಿಯಲ್ಲಿ ಬರುವಾಗ ರಾಯರು,

'ಏನಯ್ಯಾ ಇವತ್ತಿನ ಬ್ರೇಕಿಂಗ್ ನ್ಯೂಸ್?' ಎಂದರು.

'ಸರ್ ಇವತ್ತು ಬೆಂಗಳೂರು–ಮಂಗಳೂರು ಶಿರಾಡಿ ಘಾಟ್ ರಸ್ತೆ, ಸನ್ಮಾನ್ಯ ಲೋಕೋಪಯೋಗಿ ಸಚಿವರಿಂದ ಉದ್ಘಾಟನೆ ಆಯ್ತಂತೆ. ವಾಸ್ತು ಪ್ರಕಾರ ಪೂರ್ವಾಭಿಮುಖವಾಗಿ ನಿಂತು ಟೇಪನ್ನು ಸಚಿವರು ಕಟ್ ಮಾಡಿದರಂತೆ.

'ಏನಯ್ಯ ಈ ಮತಿಭ್ರಾಂತಿ? ಅಪ್ಪಿ–ತಪ್ಪಿ ಈ ಸಚಿವರು ಆರ್ಮಿ ಚೀಫ್ ಆಗಿದ್ದರೆ ನಮ್ಮ ದೇಶದ ಗತಿ ಏನಾಗ್ತಿತ್ತಯ್ಯ?

'ಯಾಕ್ಸಾರ್? ಈ ಅನುಮಾನ' ಎಂದೆ

'ಯೋಧರೆಲ್ಲಾ ಎಲ್ಲಾ ಕಾಲಕ್ಕೂ ಪೂರ್ವಾಭಿಮುಖವಾಗಿಯೆ ನಿಂತು ಗಡಿಯಲ್ಲಿ ಗುಂಡು ಹೊಡೆಯತಕ್ಕದ್ದು ಎಂದು ಇವರು ಆಜ್ಞಾಪಿಸಿ ಭದ್ರತಾ ಪಡೆಗಳು ಹೊಡೆಯುವ ಗುಂಡುಗಳೆಲ್ಲಾ ನಮ್ಮ ದೇಶದೊಳಗೇ ಬೀಳುತ್ತಿತ್ತಲ್ಲಯ್ಯ, ಯಾಕೆಂದರೆ ನಮ್ಮ ಶತ್ರು ರಾಷ್ಟ್ರವಿರೋದು ಉತ್ತರದಿಕ್ಕಿಗೆ...'

ರಾಯರ ಈ ಸತ್ಯದ ನುಡಿಗಳು ನನ್ನ ಮೈಯನ್ನೊಮ್ಮೆ ಕಲಕಿದಂತಾಯ್ತು. ಮಾನವ ವಾಸ್ತು ನಿಷ್ಠನಾಗಬೇಕೊ? ಅಥವ ವಸ್ತುನಿಷ್ಠನಾಗಬೇಕೊ? ಎನ್ನುವ ದ್ವಂದ್ವ ಆ ಸಂಜೆಯಿಂದಲೇ ನನ್ನನ್ನು ಕಾಡಲು ಪ್ರಾರಂಭಿಸಿತು.

# ಅವರವರ ಜಾಯಮಾನ

● ಶಾಂತರಾಜ ಐತಾಳ

## ಜಾಯಮಾನದ ಜಾಣತನ ಹುಡುಕಲಾಗದೇ?

ಓರ್ವ ಮನೋರೋಗತಜ್ಞರಿಗೆ ಒಂದು ಪ್ರಶ್ನೆ ಕೇಳಲಾಯ್ತು. 'ಹೊರನೋಟಕ್ಕೆ ಸರಿಯಾಗಿಯೇ ಕಾಣಿಸುವ ಮನೋರೋಗಿಯೊಬ್ಬನನ್ನು ಸುಲಭವಾಗಿ ನೀವು ಹೇಗೆ ಪತ್ತೆ ಹಚ್ಚುತ್ತೀರಿ' ಎಂದು.

ಅದಕ್ಕೆ ತುಸು ಹೊತ್ತು ಯೋಚಿಸಿದ ವೈದ್ಯರು ಉತ್ತರಿಸುತ್ತಾರೆ– 'ನೋಡಿ ಇದಕ್ಕೆ ಹಲವಾರು ವಿಧಾನಗಳಿವೆ. ಅವುಗಳಲ್ಲಿ ಒಂದು ವಿಧಾನವೆಂದರೆ ನೀವು ಆತನಿಗೆಯಾವುದೋ ಒಂದು ಪ್ರಶ್ನೆ ಕೇಳುತ್ತೀರಿ. ಈ ಪ್ರಶ್ನೆಗೆ ಸಾಮಾನ್ಯವಾಗಿ ಸುಸ್ಥಿತಿಯಲ್ಲಿರುವ ಯಾರೊಬ್ಬರೂ ಸರಿಯಾದ ಉತ್ತರಕೊಡಬಹುದು. ಅದಕ್ಕೆ ಆತ ತಡವರಿಸಿದರೆ, ಆತನಿಗೆ ಸ್ವಲ್ಪ ಮಟ್ಟಿಗೆ ಮಾನಸಿಕ ತೊಂದರೆ ಇದೆ ಎಂದು ಊಹಿಸಬಹುದು'.

'ಉದಾಹರಣೆಗೆ?'

'ಉದಾಹರಣೆ ಎಂದರೆ, ಆತನ ಬಳಿ ಹೀಗೆ ಒಂದು ಪ್ರಶ್ನೆ ಕೇಳಲಾಗುತ್ತದೆ. ಮಹಾತ್ಮಾಗಾಂಧಿಯವರು ತಮ್ಮ ಆಯುಸ್ಸಿನ ಕೊನೆಯ ದಿನದಂದು ಪ್ರಾರ್ಥನಾ ಸಭೆಯಲ್ಲಿ ಭಜನೆ ನಡೆಸುತ್ತಿರುವಾಗ ಅವರ ಅಸಂಖ್ಯ ಅಭಿಮಾನಿಗಳು ನೆರೆದಿದ್ದರು. ಆ ಈ ಗುಂಪಿನ ಮಧ್ಯದಿಂದ ನಾಥೂರಾಮಗೋಡ್ಸೆ ಎಂಬಾತ ಅವರತ್ತ ಗುಂಡು ಹಾರಿಸುತ್ತಾನೆ. ಹಾಗಾದರೆ ಗಾಂಧೀಜಿಯವರ ಕೊಲೆ ಮಾಡಿದವರಾರು? – ಇದಕ್ಕಾತ ಸ್ವಲ್ಪಕಾಲ ಆಕಾಶ ನೋಡಿ ಮತ್ತೆ ಉತ್ತರಿಸುತ್ತಾನೆ – ನನಗೆ ಮೊದಲಿಂದಲೂ ಚರಿತ್ರೆಯಲ್ಲಿ ಅಷ್ಟೊಂದು ಆಸಕ್ತಿ ಇಲ್ಲ ಸರ್– ಎಂದು. ಇದರರ್ಥ ಆತನಿಗೆ ಮಾನಸಿಕ ಸಮಸ್ಯೆ ಇದೆ ಎಂದಾಯಿತು'.

ಹೌದು. ಎಷ್ಟೋ ಸಲ ನಾವು ಇಂತವರನ್ನು ಭೇಟಿಯಾಗುತ್ತಲೇ ಇರುತ್ತೇವೆ. ನಾವೇ ಕೆಲವೊಮ್ಮೆ 'ಮೆಂಟಲ್‌ಕೇಸ್' ಗಳಂತೆ ವರ್ತಿಸುವುದೂ ಇದೆ!.

ಹಲವು ವರ್ಷಗಳ ಹಿಂದೆ ನಾನು ಗ್ರಾಮೀಣ ಪ್ರದೇಶದ ರಸ್ತೆಯೊಂದರ ಮೇಲೆ ಸ್ಕೂಟರ್‌ನಲ್ಲಿ ಹೋಗ್ತಾ ಇದ್ದೆ. ಹೊಸ ಕೈನೆಟಿಕ್ ಹೊಂಡಾ ವಾಹನವಾದ್ದರಿಂದ ಬ್ರೇಕ್ ಬಹಳ ಸೂಕ್ಷ್ಮವಾಗಿತ್ತು. ನಾಯಿಯೊಂದು ಅಡ್ಡ ಬರುವುದನ್ನು ನೋಡಿ, ತಕ್ಷಣ ಬ್ರೇಕನ್ನು ಜೋರಾಗಿ ಅದುಮಿ ಬಿಟ್ಟೆ. ನಾಯಿ ಅತ್ತ–ಸ್ಕೂಟರ್ ಇತ್ತ–ಧರೆಯ ಮೇಲೆ ದೊರೆ–ಆಗಿ ಬಿಟ್ಟೆ. ಎರಡೂ ಮುಂಗೈಗಳ ಮೇಲೆ ತರಚು ಗಾಯಗಳಾಗಿತ್ತು. ವೈದ್ಯರ ಸಹಾಯ ಬೇಕಿದ್ದರೆ ಕನಿಷ್ಠ ಐದಾರು ಕಿಲೋ ಮೀಟರ್‌ದೂರ ಸಾಗಬೇಕೆಂದು ನನಗೆ ಗೊತ್ತಿತ್ತು. ಆದರೆ ಅನತಿದೂರದಲ್ಲೇ ನನ್ನ ಅಕ್ಕನ

ಮಗಳು ವಿಜಿಯ ಮನೆ ಇದೆ ಎಂದು ನೆನಪಿಸಿಕೊಂಡು, ಸಾವರಿಸಿಕೊಂಡು, ಅಲ್ಲಿಗೆ ತಲುಪಿದೆ.

ನನ್ನ ಪರಿಸ್ಥಿತಿಯನ್ನು ವಿಜಿಗೆ ವಿವರಿಸಿ ಕೂಡಲೇ ನನ್ನ ಎರಡೂ ಮುಂಗೈಗಳನ್ನು ಬಟ್ಟೆಯಿಂದ ಒರೆಸಿ, ನನ್ನ ಗಾಡಿಯಲ್ಲೇ ಇದ್ದ ಔಷಧಗಳನ್ನು ಹಾಕಲು ಹೇಳಿದೆ. ಆದರೆ ನಾನು ಹೇಳಿದ ಮಾತುಗಳೆಲ್ಲ ವಿಜಿಯ ಕಿವಿಗೆ ಬಿದ್ದಂತೆಕಾಣಲಿಲ್ಲ. ಬದಲಿಗೆ ಅವಳು ನನ್ನ ಕೈಗಳನ್ನು ನೋಡುತ್ತಾ 'ಅದೇನು ಮಾವಾ, ನಿಮ್ಮ ರಕ್ತ ಪಿಂಕ್‌ಕಲರ್ ಇದೆ?' ಅಂತ ಕೇಳಿದಾಗ ನನಗೆ ನಗಬೇಕೋ ಅಳಬೇಕೋ ಅಂತತೋಚಲಿಲ್ಲ!

ಕರ್ನಾಟಕದ ಒಂದು ಭಾಗದಲ್ಲಿ ಗೆಳೆಯರೊಡನೆ ಪ್ರವಾಸ ಹೋಗುತ್ತಿದ್ದಾಗ ಒಂದು ಕಡೆ ನೂರಾರು ಕುರಿಗಳು ಕ್ರಮಬದ್ಧವಾಗಿ ತಮ್ಮಷ್ಟಕ್ಕೇ ಸಾಗುತ್ತಿದ್ದವು. ಮುಂದಿನ ಕುರಿ ಎತ್ತ ಸಾಗುತ್ತಿದೆ ಎಂಬುದನ್ನು ನೋಡಿ ಹಿಂದಿನ ಕುರಿಯ ಚಲನೆ ಇದನ್ನು ನೋಡುತ್ತಾ ನಾನು ಗೆಳೆಯ ಶಿವೂ ಬಳಿ ಹೇಳಿದೆ– 'ನಿಸಾರ್‌ಅಹಮದರು ಕುರಿಗಳು ಸಾರ್ ನಾವು ಕುರಿಗಳು–ನೆನಪಾಗುತ್ತಲ್ವ?' ಅಂತ. ಅಷ್ಟರಲ್ಲಿ ನಮ್ಮಕಾರಿನ ಚಾಲಕ ತನ್ನ ಅಭಿಪ್ರಾಯವನ್ನೂ ಮಂಡಿಸಿದ 'ಅದಕ್ಕಿಂತ ಹೆಚ್ಚಾಗಿ – ಈ ಕುರಿಗಳೆಲ್ಲ ಒಂದು ಸ್ಪೆಷಲ್ ಬ್ರಾಂಡ್‌ನವು. ತುಂಬ ರುಚಿಕರ!' ಎಂದು. ಚಾಲಕನ ವಿಚಾರ ಲಹರಿಗೆ ನಾವೆಲ್ಲ ಬೆರಗಾದೆವು.

ಅಮೇರಿಕದ ಒಂದು ಸಂಸ್ಥಾನದಲ್ಲಿ ನಡೆದ ಒಂದು ಘಟನೆ ಒಮ್ಮೆ ವರದಿಯಾಗಿತ್ತು. ಓರ್ವ ಮಹಾಶಯ ತನ್ನ ಮನೆಗೆ ಒಂದು ಹೊಚ್ಚ ಹೊಸ ಫ್ರಿಜ್ ಖರೀದಿಸಿ ತಂದಿದ್ದನಂತೆ. ಹಾಗಂತ ಹಳೆಯ ಫ್ರಿಜ್ ಏನೂ ನಿರುಪಯುಕ್ತ ಆಗಿರಲಿಲ್ಲ. ಆದರೂಚಿಕ್ಕ ದುರಸ್ತಿ ಬೇಕೆನಿಸಿದರೂ, ಆ ಪದಾರ್ಥಕ್ಕೆ ವಿದಾಯ ಹೇಳುವ ಜೀವನ ಶೈಲಿ ಅವರದು. ಅಂತೂ ವಿದಾಯ ಹೇಳಿದ ಹಳೆಯ ಫ್ರಿಜ್ಜನ್ನು ತಮ್ಮ ಗೇಟಿನ ಬದಿಗೆ ಸಾಗಿಸಿ, ಅಲ್ಲಿ ಒಂದು ಸಣ್ಣ ಫಲಕವನ್ನೂ ಅಳವಡಿಸಿಬಿಟ್ಟನಂತೆ ಆ ಮಹಾಶಯ. ಆ ಫಲಕದಲ್ಲಿ 'ಉತ್ತಮ ಸ್ಥಿತಿಯಲ್ಲಿರುವ ಫ್ರಿಜ್ ಇದಾಗಿದೆ. ಯಾರು ಬೇಕಾದರೂ ಒಯ್ಯಬಹುದು – ಇದುಧರ್ಮಾರ್ಥ ಕೊಡುಗೆ' – ಎಂಬ ಮಾತುಗಳನ್ನು ಬರೆಸಿದ್ದ.

ಹತ್ತು ದಿನಗಳಾದರೂ ಆ ಫ್ರಿಜ್ ಅದೇಜಾಗದಲ್ಲಿ ಉಳಿಯಿತು. ಅದನ್ನು ಒಯ್ಯಲುಯಾವ ಭೂಪನೂ ಆಸಕ್ತಿ ತೋರಲಿಲ್ಲವಂತೆ. ಅದನ್ನು ಯಜಮಾನ ಮತ್ತೆ ಒಳಗೆ ತಂದು, ಒಂದು ವಾರದ ನಂತರ ಇನ್ನೊಮ್ಮೆ ಅದೇಗೇಟಿನ ಬದಿಯೇ ಅದನ್ನು ಇರಿಸಿದನಂತೆ. ಆದರೆ ಈ ಸಲ ಫಲಕವನ್ನು ಮಾತ್ರ ಬದಲಾಯಿಸಿದ. 'ಉತ್ತಮಕಂಡಿಷನ್‌ನಲ್ಲಿರುವ ಫ್ರಿಜ್ ಮರಾಟಕ್ಕಿದೆ. ಬೆಲೆ ಕೇವಲ ನೂರುಡಾಲರ್.' ಆದರೆ ಮರುದಿನ ಬೆಳಿಗ್ಯೆ ನೋಡುವಾಗ ಆ ಫ್ರಿಜ್ಜನ್ನು ಯಾರೋ ಲಪಟಾಯಿಸಿ ಬಿಟ್ಟಿದ್ದರು! ಅಂದರೆ

ಈ ಮನೋಸ್ಥಿತಿ ಜಾಗತಿಕ ಮಟ್ಟದ್ದಾಗಿದ್ದು ಭಾರತಕ್ಕೆ ಮಾತ್ರವೇ ಸೀಮಿತವಲ್ಲ ಎಂದಾಯಿತು.

ಭಾರತದ ಸೂರತ್ ನಗರದ ಬಳಿ ನಡೆದ ಒಂದು ನೈಜಘಟನೆ ಇದಾಗಿದೆ. ಕಿಕ್ಕಿರಿದ ವಾಹನ ದಟ್ಟಣೆ ಇರುವ ಅಲ್ಲಿಯ ಒಂದು ಹೆದ್ದಾರಿಯ ಮೇಲೆ ನಡೆದ ಆಕಸ್ಮಿಕ ಅವಘಡದಿಂದಾಗಿ ಒಂದು ಲಾರಿಯ ಮುಂಭಾಗದಲ್ಲಿ ಬೆಂಕಿ ಕಾಣಿಸಿಕೊಂಡಿತು. ಅಗ್ನಿಶಾಮಕ ದಳದ ಕಚೇರಿ ಸನಿಹದಲ್ಲೇ ಇದ್ದರೂ, ವಾಹನಗಳ ನಿಬಿಡತೆಯಿಂದಾಗಿ ವಿಷಯ ತಿಳಿದರೂ ಅವರಿಗೆತಕ್ಷಣ ಸ್ಥಳಕ್ಕೆ ಬರಲಾಗಲಿಲ್ಲ. ಅವರು ಬರುವಷ್ಟರಲ್ಲಿಇತರ ಲಾರಿಚಾಲಕರ ಪ್ರಯತ್ನದ ಹೊರತಾಗಿಯೂ ಲಾರಿಯ ಮುಂಭಾಗಕರಕಲಾಗಿ ಹೋಗಿತ್ತು.ಅಂತೂ ಬೆಂಕಿ ಪೂರ್ತಿಯಾಗಿ ನಂದಿತು. ಪೋಲೀಸ್‌ನವರೂ ಬಂದು ಮಹಜರ್ ನಡೆಸಿದರು. ಲಾರಿಯ ಚಾಲಕನ ಬಳಿ ಅಪಘಾತದಕಾರಣವನ್ನೆಲ್ಲ ದಾಖಲಿಸಿಕೊಂಡು 'ಲಾರಿಯಲ್ಲಿ ಏನು ಲೋಡ್‌ಇದೆ?' ಎಂದು ಕೇಳಿದರು. ಈ ವಿಷಯ ಚಾಲಕನಿಗೆ ಗೊತ್ತೇ ಇರಲಿಲ್ಲವೆಂದು ಉತ್ತರಿಸಿದನಾತ. ಸರಿ, ಪೋಲಿಸ್‌ನವರು ಹಿಂದುಗಡೆ ಹಾಕಿದ ಬೀಗ ಒಡೆದು ನೋಡುವಾಗ ಅವರಿಗೆ ಅಚ್ಚರಿಕಾದಿತ್ತು. ಯಾಕೆಂದರೆ ಲಾರಿಯಲ್ಲಿದ್ದ ಲೋಡು ಅಗ್ನಿಶಾಮಕ ಉಪಕರಣಗಳದ್ದು! ಒಂದೇ ಒಂದು ಉಪಕರಣವನ್ನು ಬಳಸಿ, ಬೆಂಕಿಯನ್ನು ನಂದಿಸಲು ಸಾಧ್ಯವಿತ್ತು; ಈಗಾದ ನಷ್ಟವನ್ನು ತಪ್ಪಿಸಬಹುದಿತ್ತು – ಎಂದು ಪೋಲೀಸರು ಚಾಲಕನನ್ನು ಗದರಿಸಿದಾಗ ಆತ –'ಮಾಲಿಕರುಕೊಟ್ಟ ಮಾಲನ್ನು ತಲುಪಿಸುವುದು ಮಾತ್ರ ತನ್ನ ಕೆಲಸವೇ ಹೊರತು ಸಾಮಗ್ರಿ ಯಾವುದು ಎಂದು ತಿಳಿಯುವುದಿಲ್ಲ'–ಎಂದಾಗ ಪೋಲೀಸರು ತಬ್ಬಿಬ್ಬಾಗ ಬೇಕಾಯಿತಂತೆ!

ನಮ್ಮೂರಿನ ಮಾಬ್ಲಣ್ಣ ಎನ್ನುವವರು ವಿದ್ಯಾ ಇಲಾಖೆಯ ಉನ್ನತ ಹುದ್ದೆಯಿಂದ ನಿವೃತ್ತಿ ಹೊಂದಿದ ಮಹಾನುಭಾವ. ಅವರೊಡನೆ ಮಾತನಾಡುವಾಗಯಾವುದಾದರೂ ಹಾಸ್ಯಘಟನೆಯನ್ನು ಸೇರಿಸಿದರೆ, ಅವರು ತಕ್ಷಣ ಅದಕ್ಕೆ ಅಡ್ಡ ಪ್ರಶ್ನೆ ಹಾಕುವುದು ಅವರ ಜಾಯಮಾನ. ಒಮ್ಮೆ ಅವರ ಬಂಧು ಒಬ್ಬರು ಮಾತನಾಡುತ್ತಾ ಅವರ ಬಳಿ ಹೇಳಿದರಂತೆ– 'ನನ್ನ ಹೆಂಡತಿಗೆ ಸೀರೆ ತಂದುಕೊಟ್ಟುಕೊಟ್ಟು ನನಗೆ ಸಾಕಾಗಿ ಹೋಯ್ತು. ಇವತ್ತೊಂದು ಬಣ್ಣ, ನಾಳೆಗೊಂದು ಬಣ್ಣ ಅಂತ ನನ್ನನ್ನು ಗೋಳು ಹೊಯ್ಕೊಳ್ತಾ ಇರ್ತಾಳೆ. ನಾನು ಅದಕ್ಕೇ ಅವಳಿಗೆ ಹೇಳಿದ್ದೇನೆ – ನೀನು ಹೀಗೇ ಸೀರೆ ಕೇಳ್ತಾ ಇದ್ರೆ ನಾನು ಆತ್ಮಹತ್ಯೆ ಮಾಡಿಕೊಳ್ತೇನೆ – ಅಂತ' – ಅದಕ್ಕೆ ಅವಳೇನು ಹೇಳಿದ್ಲು ಗೊತ್ತಾ – ಹಾಗಾದ್ರೆ ಅದಕ್ಕೆ ಮೊದಲು ನನಗೆರಡು ಬಿಳೀ ಸೀರೆ ತಂದುಕೊಡ್ರೀ – ಅಂತ'

ಈ ಒಂದು ಘಟನೆಯನ್ನು ಕೇಳಿಸಿಕೊಂಡ ಮಾಬ್ಲಣ್ಣ ತಮ್ಮ ಬಂಧುವಿಗೆ ಕೇಳಿದ ಪ್ರಶ್ನೆ ಏನು ಗೊತ್ತಾ–'ನೀನು ಆ ಮೇಲೆ ಬಿಳಿ ಸೀರೆ ತಂದು ಕೊಟ್ಯಾ' – ಅಂತ! ಇದು ಮಾಬ್ಲಣ್ಣನಜಾಯಮಾನ!

# ಸಂಜೆಹೊತ್ಗೆ ಸೀರೆ ಎಂಟ್ಕೊಳ ನೇಯ್ದರಂತೆ

● ಎಚ್.ಆರ್. ಹನುಮಂತರಾವ್

## ಕೈ ಬಿಟ್ಟ ಸೀರಿಯಲ್ ಕಥೆ

ಯಥಾ ಪ್ರಕಾರ ನಮ್ಮ ಸೋಷಿಯಲ್ ಕ್ಲಬ್ ಸಭೆ–ಅಂದ್ರೆ ಸೋಮು, ಚಂದ್ರು, ರಾಘಣ್ಣಿ, ವಿಶ್ವ ಮತ್ತು ನಾನು–ಇತ್ತೀಚೆಗೆ ಹೊಸ್ದಾಗಿ ಫ್ರಾನ್ಸಿಸ್ ಹಾಗು ಕುಂಜುಣ್ಣಿ ಸೇರ್ಪಡೆಯಾಗಿದೆ–ಗಣೇಶನ ಹಬ್ಬದ ಮಾರ್ನೆ ದಿನ ಸಂಜೆ ನಡೆಸಿದ್ವಿ–ಜಾಗ ನಮ್ಮನೆ ಮಹಡಿಯ ಮೇಲಿನ ನನ್ನದೇ ಕೊಠಡಿ, ಅದೇ ನಮ್ಮ ಗ್ರೀನ್ರೂಮು. ಹೆಸರಿಗಷ್ಟೇ, ನಾಟಕ ಮಂಡಳಿ–ಸದ್ಯಕ್ಕೆ ಕೇವಲ ಹರಟೆ ಮಂಡಳಿ, ಆದರೆ ನಾಟಕದ ಪ್ರಯತ್ನ, ಚರ್ಚೆಗಳಿಗೇನೂ ಕಮ್ಮಿಯಿಲ್ಲ. "ಸೋಮು, ನಿಂಗಿಷ್ಟವಾದ ಟೀವೀ ಸೀರಿಯಲ್ಯಾವುದು?,ನಂಗಂತೂ "ಏ" ಟೀವೀನ 'ಧನಿಷ್ಟ' ನಕ್ಷತ್ರ, 'ಹಾಯ್' ಟೀವೀನ 'ಕಳೆದು ಹೋದವಳು', ಮತ್ತೆ 'ಜೀರೋ' ಟೀವೀನ 'ಸಿಕ್ಕಿದ್ದೇನು?' ಪರವಾಗಿಲ್ಲ ಅನ್ನಸ್ತು, ಆದ್ರೆ ಯಾವ ಸೀರಿಯಲ್ಲೂ ಮುಗಿಯೋ ಸೂಚ್ನೇನೇ ಇಲ್ಲ. ಎರಡು ವರ್ಷಗಳಾದ್ರೂ, ಒಂದೇ ತರಾ ಡಯಲಾಗು, ಹೆಚ್ಚೂ ಕಮ್ಮಿ.' ಅಂದ ನಮ್ಮ ವಿಶ್ವ. ಚಂದು್ರ"ಧನಿಷ್ಟ ನಕ್ಷತ್ರ ಆಕಾಶ್ದಲ್ಲಿ ಹುಡುಕ್ತಾ ಇದಾರೆ ಅಂತ್ಕಾಣುತ್ತೆ, ಅದು ಸಿಗೋವರ್ಗೂ ಸೀರಿಯಲ್ ನಿಲ್ಲಲ್ಲ, ಅದು ಸಿಗಲ್ಲ, ಇದು ನಿಲ್ಲಲ್ಲ, ಇನ್ನು ಕಳೆದು ಹೋದವಳು ಬೆಂಗ್ಳೂರ್ನಲ್ಲಿ ಎಷ್ಟ್ ಹುಡುಕಿದ್ರೂ ಸಿಗಕ್ ಸಾಧ್ಯವಾ, ಈ ಸೀರಿಯಲ್ಲೂ ನಿಲ್ಲಲ್ಲ ಬಿಡು, ಇನ್ನ 'ಸಿಕ್ಕಿದ್ದೇನು?' ಟೀವೀ ಸೀರಿಯಲ್ನಲ್ಲಿ ನೋಡೋವ್ರಿಗೆ ಸಿಕ್ಕಿದ್ದೇನು ಅನ್ನೋದೇ ಮುಖ್ಯ ಪ್ರಶ್ನೆ, ಬಹುಶ:, ತಲೆನೋವು, ಸಾಂಕ್ರಾಮಿಕ ಜ್ವರ, ಆಗಾಗ್ಗೆ ಅತಿಸಾರ, ಮೈ ಪರಚಿಕೊಳ್ಳೋ ತರ ಆಗೋದಷ್ಟೇ ಶೇಷಪ್ರಶ್ನೆ ಏನಂತೀ", "ವಿಶ್ವ, ನಿಂಗ್ಯಾಕ್ಕಿದ್ದೀತು ಈ ಸೀರಿಯಲ್ಗಳ ಉಸಾಬರೀ, ಅದ್ರ ಬದ್ಲು ಹೊತ್ತು ಹೋಗೋಕೆ ಜೋಬ್ನಲ್ಲಿ ಒಂದಷ್ಟು ನೋಟುಗಳ್ನ ಹಾಕ್ಕೊಂಬ, ನಾವಿದೀವಿ, ನಿಂಗೆ ಟೈಂ ಪಾಸ್ ಮಾಡ್ಸಕ್ಕೆ" ಲೇವಡಿ ಮಾಡಿದ ನಮ್ಮ ಸೋಮು. "ಸಾಕ್ನಿಲ್ಸು, ಈ ಹೆಸ್ರುಗಳು ಕೇಳಿದ್ರೇನೆ ನನ್ತಲೆ ಗಿರ್ಕಿ ಹೊಡೆಯುತ್ತೆ, ಮತ್ತೇನಾದ್ರೂ ವಿವರ, ವರ್ಣನೆ ಶುರು ಮಾಡಿದ್ಯೋ ಅಷ್ಟೇ" ಸೋಮು ಉವಾಚ.

"ಹಾಗೆಲ್ಲಾ ನೀನು ಅಷ್ಟೊಂದು ಸೀರಿಯಸ್ ಆಗಿ ಸೀರಿಯಲ್ಗಳ್ನ ತಗೋಬಾರದು, ಅವಕ್ಕೆಲ್ಲಾ ಹೈ ಟೀಆರ್‌ಪಿ ರೇಟಿಂಗ್ ಇದ್ರೇನೆ ಅವ್ರು ಮುಂದ್ವರ್ಸೋದು, ಇದೆಲ್ಲ ಕಮರ್ಶ್ಯಿಯಲ್ ಯುಗ, ಅಲ್ದೆ ಅವುಗಳ ಭಕ್ತಾದಿಗಳು ಇಷ್ಟ ಪಡೋವಾಗ ನಿನಗೆ ಬ್ಯಾಡ ಅನ್ಸಿದ್ರೆ ಬಾಲ ಮುದರ್ಕಂಡಿರು, ನೋಡಬ್ಯಾಡ, ಅಷ್ಟೇಯ" ವಿಶ್ವ ಸಮರ್ಥಿಸಿಕೊಂಡ ತಾನೂ ಸೀರಿಯಲ್ ಅಡಿಕ್ಟ್ ಆಗಿರೋದನ್ನ!

ರಾಘಣ್ಣಿ ಹೊಸ ಐಡಿಯಾ ಹಾಕ್ದ"ನಾವೇ ಯಾಕೆ ಒಂದು ಸೀರಿಯಲ್ನ ತೆಗೀಬಾರ್ದು? ನಿಂದೇ ಬ್ಯಾಂಕ್ ಅಕೌಂಟ್ನಲ್ಲಿ ಹಣ ಹೂಡಿ, ಕಥೆ, ಸ್ಕ್ರಿಪ್ಟ್ ರೆಡಿ ಮಾಡ್ಕಂಡ್ ಚಾನೆಲ್ ಕಮಾಂಡರ್ಸನ ಹೋಗಿ ನೋಡೋದು?", "ನಿಂಗೇನ

ಅನುಭವ ಇದೆ ಅಂತ ಅವ್ರುಗೋಳು ಮಣೆ ಹಾಕ್ತಾರೆ, ಹಣ ಒದಗಿಸೋ ಚಿಕ್ಕಪ್ಪ ಯಾರು, ಎಲ್ಲಿಂದ ಕ್ಯಾಪಿಟಲ್ ತರ್ತಿ, ಬಾಯಿದೆ ಅಂತ ಏನೇನೋ ಒದರ್‌ಬ್ಯಾಡ" ಸೋಮು ಅವ್ನ ಬಾಯ್ಮುಚ್ಚಿಸಿದ. ಅಲ್ಲಿಗೆ ಆ ಮಾತು ಮುಕ್ತಾಯ, ಹರಟೆ ಮತ್ತೆಲ್ಲಿಗೋ ತಿರುಗಿತು.

ನನಗೂ ಅನ್ನಿಸಿದ್ದುಂಟು, ಈ ಟೀವೀ ಸೀರಿಯಲ್ಲೋಳು ಸಂತೆ ಮಾದರಿಯಾ, 'ಸಂಜೆ ಹೊತ್ಗೆ ಸೀರೆ ಎಂಟ್ಮೊಳ ನೇಯ್ದರಂತೆ' ಅನ್ನೋ ಹಾಗೆ ಕಸರತ್ಮಾಡೋದಾ, ಯಾವ್ಗುಣ ಮಟ್ಟ ಇವಕ್ಕೆ ಅನ್ವಯುಸ್ತಾರೆ, ಕಥಾ ಹಂದರ ನಮ್ಮ ಹಳೇಕಾಲ್ದ ಕಾದಂಬರೀಗಳ ತರಹ ಬರದು ಮುಗಿಸಿದ್ಮೇಲೆ, ನೋಡಿ, ಚೆನ್ನಾಗಿದೆ ಅಂತ ಹೇಳೊ ಸಾಹಿತಿಗಳ ಮಾತ್ನ ಆಧಾರದ ಮೇಲೆ, ಸ್ಕ್ರಿಪ್ಟ ಬರೆಯೋದುಂಟಾ ಅಥವ ಇವತ್ತಗಿಷ್ಟು, ನಾಳೆಗೆ ಇನ್ನಷ್ಟು ಅನ್ನೋ ತರಾ ಬರೆದು ಮುಗ್ಸೋದಾ, ಈ ಟೀಆರ್ಪೀ ಅಂದ್ರೆ ಯಾವರೀತಿ ತಕಡಿ ಲೆಕ್ಕ?'–ನಾನೇ ಸ್ವಲ್ಪ ಜೋರಾಗಿ ಮೆಲಕು ಹಾಕ್ತಾ ಇದ್ದಾಗ ನನ್ಮಾತು ಕೇಳಿಸ್ಕಂಡ ಸೋಮು ಅಂದ "ಹೊಸ್ದಾಗಿ ಟೀವೀ ಮಾಧ್ಯಮ ಕನ್ನಡಕ್ಕೂ ಸೇರ್ಪಡೆಯಾದಾಗ, ಏಕಮೇವ ಸರ್ಕಾರಿ ಚಾನೆಲ್ ಆಗಿದ್ರೂ ತುಂಬಾ ಒಳ್ಳೊಳ್ಳೆ ಸೀರಿಯಲ್ಗಳು ಬಂದುಹೋದ್ವು, 'ಮಹಾಭಾರತ್' ಹಿಂದೀಲಿ ತೆಗದ್ರೂ ಇಡೀ ದೇಶ್ವೇ ಎಲ್ಲಾ ಬಿಟ್ಟು ಭಾನ್ವಾರ ಬಂದ್ರೆ ನೋಡ್ತೋವ್ರು. ರಸ್ತೆಗಳೆಲ್ಲಾ ಖಾಲಿ ಇರೋವು ಅಂದ್ರೆ ಏನಾಶ್ಚರ್ಯ?". ರಾಘಣ್ಣಿ ಧ್ವನಿ ಕೂಡಿಸಿದ "ಇಂದಿನ ಕೆಲವು ಚಾನೆಲ್ಗಳಲ್ಲಿ ಬರುವ ಹಲವು ಸೀರಿಯಲ್ಗಳನ್ನ ದ್ರೌಪದಿಯ ಮಾನಭಂಗದ ಸೀನಲ್ಲಿ ದುಶ್ಶಾಸನ ಸೀರೆ ಎಳೆದೂ ಎಳೆದೂ ಸುಸ್ತಾದರೂ, ಅದು ಅಕ್ಷಯವಾಗುತ್ತಲೇ ಇರುತ್ತಲ್ಲ, ಅದಕ್ಕೆ ಹೋಲಿಸಬಹುದು. ಈ ಸೀರಿಯಲ್ಗಳನ್ನ ವಾರವಾರವೂ ರಬ್ಬರಿನಂತೆ ಎಳೀತಾನೆ ಇರ್ತಾರಲವೋ ವಿಶ್ವ?, ಅದ್ರಲ್ಲಿ ಕಂಟೆಂಟ್, ಥೀಮ್, ಆರಂಭ, ಕೊನೆ ಹುಡುಕಿದ್ರೂ ಸಿಗ್ಬಹುದೇ" "ಎಲ್ಲೋ ಹಲವು ಹಾಗೇ ಇದ್ರೂ ಒಂದೇ ತಕಡಿಗೆ ಹಾಕೋದ್ಸರಿಯಲ್ಲ ಸೋಮು, ಕ್ಯಾರೆಕ್ಟರುಗೋಳು ಯಾಕ್ಚೇಂಜ್ ಆಗ್ಬಾರ್ದು, ಕಥೆನಲ್ಲಿ ಅದೆಷ್ಟೋ ತಿರುವುಗಳಿರುತ್ತಯ್ಯ" "ನೀ ಏನಾದ್ರೂ ಅನ್ನು, ಇವತ್ತಿನ ಕಥೆ ನಾಳೆ ಬೇರೆ ಆದ್ರೂ ಹೆಚ್ಚೇನಿಲ್ಲ, ಯಾವಾಗ್ಯಾವಾಗ ಕ್ಯಾರೆಕ್ಟರುಗಳು ಚೇಂಜ್ ಆಗತಾರೋ ಭಗ್ವಂತ್ನೇ ಬಲ್ಲ", ವಿಶ್ವನಿಗೆ ರೇಗಿತು "ಗೊತ್ತಾಗ್ತಾನೆ ಪ್ರೇಕ್ಷಕ ಏನು ಮಾಡಬೇಕು, ಕಥೇನಲ್ಲಿ ಎಷ್ಟೋ ತಿರುವುಗಳಿರ್ಬಾರ್ದು ಅಂತ ರೂಲ್ಸಿದೆಯ? ಅಲ್ದೆ ಎಲ್ಲಾ ಸೀರಿಯಲ್ಗಳೂ ಒಂದೇ ತರಾ ಇರಲ್ಲ". ನಾನಂದೆ "ನೋಡ್ರಯ್ಯ, ಮನೇಲಂತೂ ಇದರಿಂದ ಶಾಂತ ವಾತಾವರಣ, ಸಂತೋಷ ಪಡ್ರಯ್ಯ, ಗಂಡ ಹೆಂಡ್ರ ಮಧ್ಯೆ ಸೀರಿಯಲ್ ವೇಳೆ ಮೌನ ಆವರಿಸಿರುತ್ತೆ, ಇಲ್ಲಾ ಗಂಡ ಕ್ಲಬ್ಬು, ಸ್ನೇಹಿತರುಗಳಿಗೆ ಚಾಲು, ಮಕ್ಕಳು ಮೊಬೈಲ್ನಲ್ಲಿ ಚಾಟು, ಗೇಮು ಇಲ್ಲ ಹೋಮ್ವರ್ಕನಲ್ಲಿ ಡಿಪ್ಪಿಂಗ್, ಇನ್ನ ಅತ್ತೆ, ಸೊಸೆ ಒಟ್ಟಿಗೇ ಕೂತು– ಬಿಡ್ತು ಅನ್ನಿ, ಆ ಕಾಲ ಎಂದೋ ಹೋಯ್ತು, ಈಗ ಮೋದಿ ಯುಗದಲ್ಲಿದೀವಿ, ಅಲ್ವೇನ್ರೋ ಬೆಪ್ಪುತಕ್ಕಿಗಳ, ಏನ್ಹೇಳ್ತೀರಾ?" ಅಂದೆ. ಚಂದ್ರು ಅಂದ 'ಈ ಮುವತ್ತು ನಿಮಿಷದ ಸೀರಿಯಲ್ಗಳಲ್ಲಿ ಐದೈದು ನಿಮಿಷಗಳಿಗೂ ಬ್ರೇಕು, ಎರಡು–ಮೂರು ನಿಮಿಷಗಳಿಗೂ ಜಾಹೀರಾತು–

ನೋಡಿದ್ದನ್ನೇ ಮತ್ತೆ ನೋಡೋದು, ಮುಖ ತೊಳೆಯಕ್ಕೆ ಯಾವ್ದೋ ಸುಂದರಿ ಅರೆನಗ್ನವಾಗಿ ಮೈಯೆಲ್ಲಾ ಕುಲುಕುತ್ತಾ ತೋರ್ಸೋ ಸೋಪು, ಹಲ್ನಲ್ಲಿ ಇರೋ ಕ್ರಿಮಿಗಳು ಹೋಗಿ ಹೊಸ್ದಾಗಿ ಬರೋವನ್ನ ತಡೆಯೋಕೆ ಇವ್ರ ಬಾ0ಡ್ ಪೇಷ್ಟ್ ಹಾಕ್ಕೊಳ್ಳೀಂತ, ಇಲ್ವೆ ಆಮಶಂಕೆ ಬಂದ್ರೆ ತಡೆಯೋಕೆ ಇವ್ರ ಗುಳಿಗೆ, ಇಲ್ವೆ ಇವ್ರ ಟೀವಿ ಬಿಟ್ಹೋಹೋಗ್ಬಾರ್ದು ಅಂತ ಮುಂದೆ ತೋರ್ಸೋ ಎರಡು, ಮೂರು ಸೀರಿಯಲ್ಗಳ ವೈಭವಾನ ಮುಂಚೇನೇ ತೋರ್ಸೋ ಜಾಹೀರಾತ್ಗಳು, ಮಧ್ಯೆ ಸಿಗ್ನಲ್ ಟ್ಯೂನ್ ಹೀಗೆ ಕಥೆ ಮುಂದುವರೆಯೋದೇ ಇಲ್ಲ, ಮತ್ತೈದು ನಿಮಿಷ ಸೀರಿಯಲ್ಲು ನಂತರ ಯಥಾ ಪ್ರಕಾರ ಅದೇ ಇಂಗ್ಲೀಷ್ನಲ್ಲಿ ಹೇಳ್ತಾರಲ್ಲ–ಅದೇ ರಿಗಮರೋಲ್.ಜಾಹೀರಾತಿಲ್ದೆ ಏನೂ ಆಗಲ್ಲ ಅದ್ಕೇ. ಹೇಗಾದ್ರೂ ಟೀಆರ್ಪೀ ಜೋರಾಗಿದ್ರೇನೆ ನಡೆಯೋದ. ಜನ ನೋಡೋದ, ನಮ್ಕೆಲ್ಸದಾಳು ಗೌರಿ ಪ್ರಕಾರ ಕರ್ಚೀಫ್ನಿಂದ ಎಷ್ಟೆಷ್ಟು ಕಣ್ಣೀರ್ಸುರಸ್ತಾರೋ ನೋಡೋವ್ರು, ಅಷ್ಟೂ ಟೀಆರ್ಪೀ ಜಾಸ್ತಿ ಆಗೋದ ಕಣ್ರವ್ವ ಅಂತ! ನಂ ರಾಘಣ್ಣಿ ಇನ್ನೂ ಒಂದ್ಸಂಶೋಧನೆ ಮಾಡಿದಾನೆ 'ನೋಡ್ರೋ ಈ ನಡ್ವೆ ಸಿನಮಾ ಗಳ್ತರಾನೇ ಪ್ರೀತಿ, ಪ್ರಣಯ, ಮರ ಸುತ್ತೋದು, ಕಿಡ್ನಾಪು, ಕದಿಯೋದು, ತೋರಸ್ತಾರೆ, ಸದ್ಯ ರೇಪ್ ಇನ್ನಾ ತೋರಸ್ತಾ ಇಲ್ಲಾಂತ್ಕಾಣುತ್ತೆ'. ಸೋಮುಗೆ ರೇಗಿತು,'ಅಲ್ಲಯ್ಯ, ಅಲ್ಲಿ ಮರ ಸುತ್ತೋದರಿಂದ,ಲವ್ಮಾಡೋದ್ನ ತೋರ್ಸೋದ್ರಿಂದ ಸೀರಿಯಲ್ ಅಚಾನಕ್ ಆಗಿ ಬೆಳೆಯುತ್ತೆ, ಅದಕ್ಕಾಗಿಯಾದ್ರೂ ಮರಗಳ್ನ ಉಳ್ಸಿಕೊಂಡಿದಾರೆ, ಮರಗಳ್ನ ಸುತ್ತಾಡಿದ್ರೆ ನಿಮಗಳಿಗೇನ್ಮುಜುಗರ ಸ್ವಾಮಿ, ನೀನೂ ಸಿನೆಮಾ ಪ್ರೀತ್ಸೋದಾದ್ರೆ, ಇದನ್ನೂ ನೋಡ್ಬೋದಲ್ಲವಾ?, ಹನಿಮೂನ್ಗೆ ಹೋದಾಗ ನಿನ್ವಿಚಾರ ಏನಾಗಿತ್ತು? ಸುಮ್ನೆ ಪೇಚಾಡೋದ ಬಿಡು.'ಅಂದ. ವಿಶ್ವನಿಗೆ ಮೊತ್ತೊಬ್ಬ ಇವನ ರೀತೀಲೇ ಮಾತಾಡಿದ್ದು ಖುಶಿಯಾಯ್ತು. ಅವ ಅಂದ ' ನೋಡ್ರೋ, ರಾಘಣ್ಣಿ ಇನ್ನೂ ಬ್ಯಾಚಲರ್,ಇವ್ನು ಮದುವೆ ಆಗೋ ಹೊತ್ಗೆ ಬೆಂಗಳೂರ್ನಲ್ಲಿ ಮರಗಳ್ನೆಲ್ಲಾ ಉರುಳಿಸ್ಬಿಟ್ಟಿರ್ತಾರೆ, ಸುತ್ತೋ ಪ್ರಶ್ನೇನೇ ಇರೋಲ್ಲ, ಯೋಚ್ನೇನೇನೆ ಬೇಡ'.

ನನಗನಸ್ತು 'ವರ್ಷಾನುಗಟ್ಲೆ ಸೀರಿಯಲ್ಗಳ್ನ ರಬ್ಬರ್ ತರಾ ಎಳೀತಾ, ನಮ್ಮೂರ್ನ ಗಮಕದ ಕೀರ್ತನ ಕ್ರಿಷ್ಣಾಚಾರ್ರು ಎಳೆದೆಳೆದು ಹಾಡುವಂತೆ, ನನ್ನಂಥಹವರನ್ನು ಹಿಂಸಿಸೋ ಬದಲು ಮಾಮೂಲಿ ಚಿತ್ರಗಳಂತೆ ಮೂರೋ ಇಲ್ಲ ನಾಲ್ಕು ಘಂಟೆ ಒಳಗೆ ಮುಗಿಯೋ ಸಿನೆಮಾನೇ ಮಾಡಿದ್ರೆ ಸಲೀಸು, ಏನಂತೀರಿ?'. ರಾಘಣ್ಣಿ ಇನ್ನೂ ಸಂಶೋಧನೆ ಮುಂದ್ವರೆಸಿದ್ದ, ಅವ್ನ ಪ್ರಕಾರ 'ಇಲ್ಲೂ ಕೊಲೆ, ದರೋಡೆ, ಥಕಥಕ ಡ್ಯಾನ್ಸು, ಕಿಡ್ನಾಪು, ಮನೇಲಿರೋ ಹೆಂಗಸ್ರು ಏನ್ಮನೆ ಕೆಲ್ಸ ಮಾಡದಿದ್ರೂ, ಯಾವಾಗ್ಲೂ ಪಿತೂರಿ ನಡೆಸೋದನ್ನೇ ಎಳೆಎಳೆ ಯಾಗ್ತೋರ್ಸಸ್ತಾರೆ, ಇಲ್ಲಿ ನಾಜೂಕು, ಪ್ರೀತಿ, ವಿಶ್ವಾಸ, ಸಹನೆ ತೋರ್ಸೋದ ಕಮ್ಮಿ, ಏನಂತೀರಿ? ಯಾರ್ ಏನ್ಮಾಡ್ತಾರೋ ಇಲೊಡ್ವೇ ನೀತಿ ಪಾಠ ಕಲಿಸ್ತಾರೆ– ಅತ್ತೆ ಮೇಲೆ ಸೊಸೆ, ಸೊಸೆ ಮೇಲೆ ನಾದ್ನಿ, ಇಲ್ವೆ ನಾದಿನಿ ಮೇಲೆ ಚಿಕ್ಕಪ್ಪನೋ ಇನ್ಯಾರೋ ಕತ್ತಿ ಮಸೀಯೋದ್ನ ತೋರಿಸ್ತಾ, ಹೊಸ್ದಾಗಿ ಮದ್ವೆ ಆಗ್ಬರೋ ಸೊಸೆ ಇವೆಲ್ಲಾ ತಲೇಲಿಟ್ಕಂಡ್, ಕಂಡೀಷನ್ಮಾಡೇ ಅತ್ತೆ ಮನೆಗೆ ಕಾಲಿಟ್ಟರೆ ಸಮಾಜ

ಹೇಗಿರುತ್ತಯ್ಯ?'. ಸೇರಿಸಿದ ವಿಶ್ವ ' ಹೀಗಾದರೆ ಹೆತ್ತು, ಹೊತ್ತು ಸಾಕಿದಾ ಮಕ್ಕಳೇ ವಯಸ್ಸಾದ ಅಪ್ಪ, ಅಮ್ಮಂದಿರನ್ನ ವೃದ್ಧಾಶ್ರಮಕ್ಕೆ ಕಳುಹಿಸಿ, ನೆಮ್ಮದಿಯಾಗಿರ್ತಾರೇನೋ? ಅದಕ್ಕೆ ಸೋಮು ಹೇಳಿದ 'ಈಗೆಲ್ಲಾ ಹಾಗೇ ಆಗ್ತಾ ಇರೋದು ನೀವ್ಗಳು ಕೇಳ್ಳಿಲ್ಲವೇನ್ರೋ?'.

ನನಗೆ ತಿಳಿದಿರೋ ಹಾಗೆ ಒಂದ್ಕಾಲ್ದಲ್ಲಿ ರೇಡಿಯೋ ಎಂಬ ಮ್ಯಾಜಿಕ್ ಪೆಟ್ಟಿಗೆಗೆ ಮರುಳಾಗಿ, ಕ್ರಿಕೆಟ್ ಮ್ಯಾಚ್ಗಳನ್ನ ಆಗಿನ ಕಾಮೆಂಟೇಟರ್ಗಳ–ವಿಜಿ, ಸುರೇಶ ರೈನ, ಬೆರ್ರಿ ಸರ್ವಾಧಿಕಾರಿ, ಆನಂದ್ರಾವ್, ಚಕ್ರಪಾಣಿ–ಇಂಥವ್ರ ಮಾತ್ಕೇಳಕ್ಕೆ ರೇಡಿಯೋಗೆ ಅಂಟ್ಕೊಡಿರ್‍ತಿದ್ದುದು, ಮನೆಗಳಲ್ಲಿ ರೇಡಿಯೋ ಇಲ್ಲದವರು ದಾರಿಯಲ್ಲಿನ ಹೋಟೆಲುಗಳ ಮುಂದೆ ನಿಂತು ವಿವರಣೆ ಕೇಳಿ, ನಮ್ಮವರು ಬೌಂಡರಿ ಬಾರಿಸಿದರೆ ಹಿಗ್ಗಿ ಕೇಕೆ ಹಾಕುವುದು, ಔಟಾದರೆ ಹಿಡಿ ಶಾಪ ಹಾಕುವುದು ಮಾಮೂಲಿಯಾಗಿತ್ತು! ದೊಡ್ಡವ್ರ ಕೈಲಿ ಬೈಯ್ಸಿಕೊಳ್ಳೋದು ಅನಿವಾರ್ಯ! ಸೈಗಾಲ, ರಫಿ, ಲತಾ, ಆಶಾ, ಮನ್ನಾಡೇ, ಮಹಾಲಿಂಗಂ, ಕಾಳಿಂಗ ರಾವ, ಪಿಟೀಲು ಚೌಡಯ್ಯ, ಜಾನಕಿ, ಅನಂತಸ್ವಾಮಿ–ಹೀಗೆ ಅವರೆಲ್ಲರ ಹಾಡುಗಳಿಗೆ ದೊಡ್ಡ ಸ್ಪೀಕರ್ನ ಮುಂದೆ ನಾಯಿಯೊಂದು ಎದುರು ನೋಡ್ತಾ ಇರೋ ಗ್ರಾಮಾಫೋನ್‌ಗೆ ಮುಗಿ ಬೀಳ್ತಾ ಇದ್ದು, ನಂತರ ಇನ್ನೊಂದು ಕ್ರಾಂತಿಯಾಗಿ, ಟೇಪ್ ರಿಕಾರ್ಡುಗಳು ಕಾಲಿಟ್ಟು, ಎರಡೇ ದಶಕಗಳ ಅಂತರದಲ್ಲಿ ಇವೂ ಮೂಲೆಗೆ ತಳ್ಳಲ್ಪಟ್ಟು, ಫ್ಲಾಪಿ, ಡಿಸ್ಕು, ಬಂದವು, ಈ ಮಧ್ಯೆ ಎಂಭತ್ತರ ದಶಕದ ನಂತರ ಈ ಆಧುನಿಕ ಮೂರ್ಖ ಪೆಟ್ಟಿಗೆ ಯಾವಾಗ ಬಂತೋ ಅಲ್ಲಿಂದ ಎಲ್ಲಾ ಜನರ ಸಂಸ್ಕೃತಿಯೇ ಬದಲಾವಣೆ ಆಗಿರೋದು, ಆಗ್ತಾ ಇರೋದ್ನ ನಾವೆಲ್ಲಾ ಇಂದು ಕಾಣ್ತಾ ಇದೇವಲ್ಲ? ಇವೆಲ್ಲಕ್ಕಿಂತ ಹೆಚ್ಚು ಪರಿಣಾಮ ಬೀದಿಬದಿಯ ಕಳ್ಳೇಕಾಯಿ ಮಾರುವ ಅಜ್ಜಿಯಿಂದ ಹಿಡಿದು, ಮೂರು ವರುಷದ ಪುಟಾಣಿ ಮಕ್ಕಳನ್ನೂ, ರಾಷ್ಟ್ರಾಧ್ಯಕ್ಷರಿಂದ ಹಿಡಿದು, ಡವಾಲಿ ಜವಾನನ ತನಕ ಬಿಡದೆ ಅಮರಿಕೊಂಡ ಸೆಲ್ಫೋನ್ ಎಂಬ ಅಂಗೈ ಅಗಲದ ಮಾಯಾವಿನಿಯ ಮರುಳಾಟಕ್ಕೆ, ವಾಟ್ಸಪ್ ಚಾಟ್ಗೆ ಮುಗಿಬೀಳದವರ್‍ಯಾರು? ಇದೀಗಿನ ಜನಕ್ಕೆ ಉಪಹಾರ, ಊಟ ಮಧ್ಯೆಯೂ ಸೆಲ್ಫೋನು ಜ್ಞಾನ ಸಂಜೀವನಿಯೇ ಆಗಿಹೋಗಿದೆಯೆನ್ನುವ ಮಾತು ಸತ್ಯಕ್ಕೆ ದೂರವಿಲ್ಲ! ಅಂದು ಆ ಸಾಧನಗಳು ಎಲ್ಲರನ್ನೂ ರೊಮಾಂಟಿಕ್ ಯುಗಕ್ಕೆ ತಳ್ಳಿದ್ದರೆ, ಇದೀಗ ಸೆಲ್ಫೋನು, ಟೀವೀ ಚಾನೆಲ್ಗಳಿಂದಾಗಿ ಎಲ್ಲೋ ನಡೆಯುವ ಕೊಲೆ, ಸುಲಿಗೆ, ಅತ್ಯಾಚಾರ, ಯಾರು, ಎಲ್ಲಿ, ಏನುಮಾಡುತ್ತಿದ್ದಾರೆ ಎಂಬುದನ್ನೂ ಮನೆಯಲ್ಲಿ ಕೂತೇ ತಿಳಿದು, ನೋಡುವಂತಹ ಸಂಸ್ಕೃತಿಗೆ ಹೊಂದಿಕೊಂಡಾಗಿಲ್ಲವೆ? ಇನ್ನು ಈ ಟೀವೀ ಚಾನೆಲ್‌ಗಳ ಟೀಆರ್ಪೀ ರೇಟಿಂಗ್ ಎಂಬ ರಕ್ಕಸನ ಬಗ್ಗೆ ಯಾಕಾದರೂ ತಲೆ ಕೆಡಿಸಕೊಳ್ಳಬೇಕು ಸೋಮು, ವಿಶ್ವ, ಚಂದ್ರು, ರಾಘಣ್ಣೀ? ನಾ ಹೇಳಿದ್ದ ಸರೀನಾ, ತಪ್ಪಾ, ಎರಡೂ ಅಲ್ಲಾ ಅಂದ್ರೆ ಇನ್ನೇನ್ರಪ್ಪಾ ನೀವೇ ಹೇಳಿ?

ವೇದೋಕ್ತಿಯ 'ಸತ್ಯಂ ವದ, ಧರ್ಮಂ ಚರ' ಹಾಗು 'ಭದ್ರಂ ಕರ್ಣೇಭಿ: ಶ್ರುಣುಯಾಮ ದೇವಾ:, ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾ:/ ಸ್ಥಿರೈರಙ್ಗೈಸ್ತುಷ್ಟುವಾಗಂ ಸಸ್ತೂನೂಭಿ:, ವ್ಯಶೇಮ ದೇವಹಿತಂ ಯದಾಯು:// ಎಂಬ ಶಾಂತಿ ಮಂತ್ರದಂತೆ ಒಳ್ಳೆಯ ದಿನಗಳು ಬರುವುದೋ ಕಾದು ನೋಡೋಣ. ಏನ್ಹೇಳ್ತೀರಿ?

# ಸ್ವಚ್ಛಭಾರತ ಅಭಿನಯ

● ಶರತ್ ಕಲ್ಕೋಡ್

**ನಮ್ಮ ಸಂಸಾರದ ಸುರಕ್ಷತೆ ನಮಗೆ ಬಹಳ ಮುಖ್ಯವಲ್ಲವೇ?**

"ಹಲೋ....ಯಾರು? ಅರೇ ಸಾವಿತ್ರಮ್ಮಾನಾ? ಇದೇನು ಬೆಳ್ಂಬೆಳ್ಳಗೇನೇ ಫೋನ್? ಯಜಮಾನರು ಮನೇಲ್ಲೀ ಇಲ್ವಾ!?"

"ಅವರಿದಿದ್ದರೆ ನಿಮಗೀಗೆಲ್ಲಿ ಫೋನ್ ಮಾಡ್ತೀದ್ದೆ ರಮಾ? ಪೇಪರು, ಟಿವಿ ನ್ಯೂಸ್ ಅಂತ ಸ್ನೇಹಿತರಿಗೆ ಮೊಬೈಲ್‌ನಲ್ಲೇ ಕೊರೀತಾ ಕೂತಿರುತ್ತಿದ್ದರು. ಇವತ್ತದೇನೋ ಸುಡುಗಾಡು, ಪಾರ್ಕ್‌ನಲ್ಲಿ ಸ್ವಚ್ಛತಾ ಅಭಿಯಾನವಂತೆ. ಹಾಗಾಗಿ ಬೆಳಗ್ಗೇನೇ ಹೋಗಿದೆ ಸವಾರಿ. ಮುದಿಯರಿಗೆ ಬೇರೇನ್ ಕೆಲ್ಸ ಹೇಳಿ. "ಹಿರಿಯ ನಡಿಗೆದಾರರ ಸಂಘ" ಅಂತ ಮಾಡಿ ಕೊಂಡಿದ್ದಾರಲ್ಲಾ? ಸಂಜೆ ಪಾರ್ಕ್‌ನಲ್ಲಿ ಹೆಜ್ಜೆ ಹಾಕುವ ಶಾಸ್ತ್ರ ಮಾಡಿ ಸುಸ್ತಾಗಿ, ಬೆಂಚ್ ಮೇಲೆ ಕುಕ್ಕರಿಸಿ ಕಳ್ಳೇಕಾಯಿ ಮೆಲ್ಲುತ್ತಾ ಹರಟೆ ಕೊಚ್ಚುತ್ತಾ ಕಾಲ ಕಳೆಯುತ್ತವೆ."

"ಅಲ್ರೀ ಸಾವಿತ್ರಮ್ಮ, ಆ ಪ್ರಧಾನ ಮಂತ್ರಿ ಮೋದಿಗೆ ಬೇರೇ ಕೆಲ್ಸ ಇಲ್ವೇನ್ರಿ! "ಸ್ವಚ್ಛ ಭಾರತ ಅಭಿಯಾನ" ಅಂತ ದೇಶಕ್ಕೆ ಕರೇನೀಡಿದ್ದೆ ನೀಡಿದ್ದು. ಪ್ರತಿ ತಿಂಗಳೂ ಎರಡನೇ ಶನಿವಾರ ಪಾರ್ಕಿನಲ್ಲಿ ಸ್ವಚತಾಭಿಯಾನ ಮಾಡ್ತಾರಂತೆ. ನಿಮ್ಮ ಮನೆಯವರ ಜೊತೆ ನಮ್ಮವರೂ ಇದ್ದಾರಲ್ಲಾ. ಎರಡು ವರ್ಷದ ಮೇಲೆ ಆಯ್ತು ಅಲ್ವೇನ್ರೀ. ನಡಿಗೆದಾರರು ಪೊರಕೆ ಹಿಡಿದು ಕಸಗುಡಿಸೋದು ತಿಂಗಳಿಗೊಂದು ದಿನದ ಫ್ಯಾಶನ್ ಆಗಿಬಿಟ್ಟಿದೆ ಕಂಡ್ರೀ...."

"ಖಂಡಿತಾ! ಅಷ್ಟೇಅಲ್ಲ ರಮಾ, ಆ ಮುದುಕರಿಗೆ ವಾಕಿಂಗ್ ಬರ್‍ತಾವಲ್ಲ ಹುಡುಗಿಯರು, ಚೆಂದಚೆಂದದ ಚೆಂದುಳ್ಳಿಯವರ ಜೊತೆ ನಗುನಗುತ್ತ ಮಾತಾಡೋದೇನು? ಪೊರಕೆ ಹಿಡಿದು ಆ ಮಿಟುಕಲಾಡಿ ಮೀನಾಕ್ಷಿಯೋರು ಸೊಂಟ ಬಗ್ಗಿಸಿ ವಯ್ಯಾರದಿಂದ ಗುಡಿಸೋ ಬರಾಮಿಯೇನು? ಅವರ ಜೊತೆ ನಿಂತು ಬೇರೇಬೇರೆ ರೀತಿ ಫೋಸ್ ಕೊಟ್ಟು ಮೊಬೈಲ್‌ನಲ್ಲಿ ಫೋಟೋ–ಸೆಲ್ಫೀ ತೆಗೆಸಿಕೊಳ್ಳೋ ವೈಭವವೇನು? ಅದನ್ನ ಫೇಸ್ ಬುಕ್‌ಗೆ, ವಾಟ್ಸ್‌ಪ್‌ಗೆ ಹಾಕಿ ಸಂಭ್ರಮಿಸೋದೇನು?"

"ಹೌದೇನ್ರೀ ಸಾವಿತ್ರಮ್ಮಾ, ನಮ್ಮನೆಯರೂ ಹಾಗೇ ಮಾಡ್ತಾರೇನ್ರೀ? ಅದೇನೋ ಮೊಬೈಲು, ಫೇಸ್‌ಬುಕ್, ವಾಟ್ಸ್‌ಪು ಅಂತೀರಲ್ಲಾ ನನ್ನ ಬಡ್ಡು ತಲೆಗೆ ಒಂದೂ ಅರ್ಥವಾಗೋದಿಲ್ಲಾರ್ರೀ... ನಾನು "ಶ್ರೀ ಗುರು ರಾಘವೇಂದ್ರಾಯ ನಮ:" ಕೋಟಿ ಬರೆದು ಒಂದು ಪುಸ್ತಕ ಮುಗಿಸಿ, ಎರಡನೇ ಕೋಟಿ ಪುಸ್ತಕಕ್ಕೆ ಪೂಜೆ ಮಾಡಿ ಪ್ರಾರಂಭಿಸಿದ್ದೀನಿ. ನಮ್ಮ ಯಜಮಾನ್ರು ಹುಡುಗಿಯರ ಜೊತೆ ಸೇರಿ ಫೋಟೋ ತೆಗಿಸಿಕೊಳ್ತಾರೆಂದ್ರೆ ಭಯವಾಗುತ್ತೆ ಕಣ್ರೀ. ಏನ್ರೀ ಮಾಡೋದು ಈಗ?"

"ಸಂಜೆ ನಮ್ಮ ಮನೆಗೆ ಬನ್ನಿ, ನನ್ನ ಮೊಬೈಲ್‌ನಲ್ಲಿ ಫೇಸ್‌ಬುಕ್ ಹಾಗೂ ವಾಟ್ಸ್‌ಪ್ ಇವತ್ತಿನ ಕಾರ್ಯಕ್ರಮದ ಮುದುಕರೆಲ್ಲಾ ಚೆಂದುಳ್ಳಿಯವರ ಜೊತೆ ಮೆರೆದಾಡುವ ಪರಿಯನ್ನು ಕಣ್ಣಾರೆ ನೀವು ಕಂಡು ಖುಷಿಪಡಬಹುದು. ನೋಡಿ ಸ್ವಚ್ಛತಾ ಅಭಿಯಾನದ ಹುಚ್ಚು ಈ ಮುದುಕರಿಗೆಲ್ಲಾ ಸದ್ಯಕ್ಕೆ ಬಿಡುವ ಹಾಗೇ

ಕಾಣುವುದಿಲ್ಲ. ಶತಮಾನೋತ್ಸವ ಆಚರಿಸಬೇಕೂಂತ ನಮ್ಮ ಮನೆಯವರು ಫೋನ್‌ನಲ್ಲಿ ಯಾರಿಗೋ ಹೇಳ್ತಾಯಿದ್ದರು. ಅವರೇ ಅಧ್ಯಕ್ಷರಲ್ಲವೇ? ಅವರ ಮಾತೂ ಅಂದ್ರೆ ಉಳಿದವ್ರಿಗೆಲ್ಲಾ ವೇದ ವಾಕ್ಯ ತಾನೇ!?"

"ಪಾರ್ಕಿಗೆ ವಾಕಿಂಗ್ ಬರೋ ಆ ಮಾಯಾಂಗನೆಯರು ಏನ್ ಮಾಟ ಮಾಡ್ತಾರೋ ಏನ್ ಕಥೆಯೋ! ಮದುವೆಯಾಗಿದ್ದ ಹೊಸ್ತರಲ್ಲಿ ಇವ್ರು ತರಕಾರಿ ಹೆಚ್ಚಿ ಕೊಡೋದೇನು? ಕಸ ಗುಡಿಸಿ ಕೊಡೋದೇನು? ಮುದ್ದು ಮಾತಾಡ್ತಾ ಬೆನ್ನ ಹಿಂದೆಮುಂದೆ ಸುಳಿಯೋದೇನು? ವಯಸ್ಸಾಗ್ತಾ ಆಗ್ತಾ ಅವೆಲ್ಲಾ ಮಾಯವಾದವು ಕಣ್ರೀ. ಈಗ ಕಷ್ಟಸುಖ ವಿಚಾರಿಸೋದಿರಲಿ, ಹ್ಯಾಗಿದ್ದೀಯಾ ಅಂತ ಕಣ್ಣೆತ್ತಿ ಸಹಿತ ನೋಡೋದಿಲ್ಲ. ಸಿನಿಮಾ, ಮಾರ್ಕೇಟ್‌ಗೆ ಕರೆದ್ರೂ ಬರೋಲ್ಲ. ಹೋಗಲಿ ದೇವಸ್ಥಾನ, ರಾಯ್ರಮಠಕ್ಕೆ ಬನ್ನಿ ಅಂತದ್ರೆ ಗೋಣು ಅಲ್ಲಾಡಿಸಿ ಹೋಗ್ತಾರೆ. ನಮ್ಮಿಂದ ಪಡೆಯೋದೆಲ್ಲ ಪಡೆದದ್ದಾಯ್ತಲ್ಲ. ವಯಸ್ಸಾದ ನಮ್ಮನ್ನ ಕಂಡ್ರೆ ಅವರೀಗೀಗ ಒಂದು ಬಗೆ ಅಸಡ್ಡೆ. ಗಂಡಸ್ರೇ ಹಾಗೆ. ಅದರಲ್ಲೂ ಪಾರ್ಕ್‌ನಲ್ಲಿ ಹುಡುಗೀಯರು, ಚಂದಚಂದ ಹೆಂಗಸರ ಜೊತೆ ಮೆರೀತ್ತಾರೇಂದ್ರೆ ನಾಳೆ ನಮ್ಮ ಗತಿ ಏನೂಂತಾ ಭಯವಾಗುತ್ತೆ ಕಣ್ರಿ...!"

"ನಾನೂ ಅದನ್ನೇ ಹೇಳ್ತಾಯಿರೋದು. ಅಭಿಯಾನ ಮಾಡಿ ಪಾರ್ಕ್ ಒಂದೇ ಯಾಕೆ ಕ್ಲೀನ್ ಮಾಡಬೇಕು? ಪೊರಕೆ ಹಿಡಿದು ನಮ್ಮನೇನೇ ಕ್ಲೀನ್ ಮಾಡ್ಲೀ. ನಮಗೂ ಸಹಾಯವಾಗುವುದಲ್ಲವೇ? ಬೇಡ ಗಂಡಸರೆಲ್ಲಾ ಸೇರಿ ನಮ್ಮ ರೋಡ್ ಕ್ಲೀನ್ ಮಾಡಬಹುದಲ್ಲ! ನೀವೇ ಏನೇ ಹೇಳಿ ರಮಾ, ಪಾರ್ಕಿಗೆ ಬರುವ ಹುಡುಗಿಯರು, ಚೆಂದದ ಹೆಂಗಸರ ಜೊತೆ ಸೊಕ್ಕುವುದಕ್ಕೆ ಮುದುಕರಿಗೆಲ್ಲಾ ಸ್ವಚತಾಭಿಯಾನ ನೆವ ಅಷ್ಟೇ! ಏನೇ ಆಗಲಿ ನಾವೆಲ್ಲಾ ಸೇರಿ ಅದಕ್ಕೊಂದು ಮದ್ದು ಅರೆದು ಖೈದ್ ಮಾಡಲೇಬೇಕು. ಮಾಡದೇಹೋದ್ರೆ ಮುಂದೆ ಇದು ಬಹಳ ಅತಿರೇಕಕ್ಕೂ ಹೋಗಿ ನಮ್ಮ ತಲೆ ಮೇಲೆ ನಾವೇ ಕಲ್ಲು ಹಾಕಿಕೊಳ್ಳುವ ಪರಿಸ್ಥಿತಿ ಎದುರಾಗಬಹುದು, ಮಾತ್ರವಲ್ಲ ನಮ್ಮ ಸಂಸಾರಕ್ಕೂ ಕಷ್ಟಕಾರ್ಪಣ್ಯಗಳ ಕೋಟಲೆ ಖಂಡಿತಾ ತಪ್ಪಿದಲ್ಲ"

"ಒಳ್ಳೇ ಫಜೀತಿಯಾಯಿತಲ್ಲ ಸಾವಿತ್ರಮ್ಮ, ಗುರು ರಾಯರೇ ನಮ್ಮನ್ನು ಈ ಸಂಕಷ್ಟದಿಂದ ಪಾರುಮಾಡಬೇಕಷ್ಟೇ. ನಮ್ಮ ಸಂಸಾರದ ಸುರಕ್ಷತೆ ನಮಗೆ ಬಹಳ ಮುಖ್ಯವಲ್ಲವೇ? ಕಮಲಮ್ಮ, ಸೀತಮ್ಮ, ಬುಳ್ಳಮ್ಮ, ನಾಗಮ್ಮ-ಹೀಗೆ ನಮ್ಮ ಬಡಾವಣೆಯ ಹಿರಿಯ ಮುತ್ತೈದೆಯರ ಎದುರು ಈ ಸಮಸ್ಯೆ ಇಟ್ಟು ಪರಿಹಾರದ ದಾರಿ ಹುಡುಕೋಣ ಏನಂತೀರಿ?"

"ಬರಿಯ ಹೋರಾಟವಲ್ಲ ರಮಾ; ಉಗ್ರವಾದ ಪ್ರತಿಭಟನೆ, ಚಳುವಳಿ ಮಾಡೋಣ, ಯಾಕೆಂದರೆ ನಮ್ಮ ಅಳಿವುಉಳಿವಿನ ಪ್ರಶ್ನೆ. ಮುಂದಿನ "ಸ್ವಚತಾಭಿ ಯಾನ"ದ ವೇಳೆಗೆ ನಮ್ಮ ಪ್ರತಿಭಟನೆ ಪ್ರಾರಂಭಿಸೋಣ...."

"ಹೌದ್ರೀ ಸಾವಿತ್ರಮ್ಮ ಇವತ್ತಿಂದ, ಈಗ್ಲೀಂದಲೇ ಆ ನಿಟ್ಟಿನಲ್ಲಿ ಕಾರ್ಯ ಆರಂಭಿಸೋಣ. ಗುಟ್ಟು ಯಾರಿಗೂ ಗೊತ್ತಾಗಬಾರದಷ್ಟೆ. ನಮ್ಮ ಪ್ರತಿಭಟನೆ ಯಶಸ್ವಿಯಾಗಲೆಂದು ನಾನು ಇನ್ನೂ ಒಂದು ಕೋಟಿ, "ಶ್ರೀ ಗುರುರಾಘವೇಂದ್ರಾಯ ನಮ:" ಬರೆಯುವ ಹರಕೆ ಹೊತ್ತುಕೊಳ್ಳುತ್ತೇನೆ. ಏನೋ ಸುಟ್ಟು ವಾಸನೆ ಬರ್ತಾಯಿದೆ. ಸ್ಟೌವ್ ಮೇಲೆ ಹಾಲಿಟ್ಟಿದ್ದೆ. ಮಾತಿನ ಬರದಲ್ಲಿ ಉಕ್ಕಿ ಸುಟ್ಟು ಕರಕ್ಲಾಯಿತೇನೋ ಬರ್ಲ್ಲಾ, ಏನ್ ಕಲೀಕಾಲ ಬಂತಪ್ಪಾ, ರಾಘವೇಂದ್ರ....ಗುರು ರಾಘವೇಂದ್ರ... ನನ್ ಮಾಂಗಲ್ಯ ಕಾಪಾಡಪ್ಪ....!!"

# ಬಗೆ ಬಗೆ ಜಗಳ

**● ಸುಕೇಶವ**

ಸೋಮು ಬ್ಯಾಗ್ ಕೈಲಿ ಹಿಡಿದು ಮನೆಯಿಂದ ಹೊರಟಾಗಿತ್ತು. ತಲೆ ತುಂಬಾ ನೂರೆಂಟು ಯೋಚನೆ. ಎಲ್ಲಿಗೆ ಹೊರಟ್ರಿ ಸ್ವಾಮಿ ಒಬ್ಬರೇ ಅಂತ ಧ್ವನಿ ಬಂದ ಕಡೆ ನೋಡಿದ. ಮನೆಗೆ ಹಾಲು ಹಾಕುವ ಹಂಸವೇಣಿ ನಗುತ್ತಾ ನಿಂತಿದ್ದಳು. ಸೋಮು ಮಾತಾಡದೇ ಇದ್ದರೂ ಅವಳೇ, ಅಮ್ಮಾವ್ರು ಇಲ್ಲದೇ ಒಬ್ಬರೇ ಹೊರಟಿದೀರ ಅಂದರೆ ನಿಮಗೆ ಜೊತೆ ಬೇಕು ಅಂತ ಅರ್ಥ. ನಾನೂ ಬರ್ಲಾ, ಅಂದ ಹಾಗೆ ಎಲ್ಲಿಗೆ ಹೊರಟಿದೀರ ಅಂತ ಕೇಳಿದಳು. ಸೋಮು ರೇಗಿ ಸ್ಮಶಾನಕ್ಕೆ, ಬರ್ತೀಯಾ ಅಂತ ಕೇಳಿದ ತಕ್ಷಣ ಹಂಸವೇಣಿ ಇದ್ಯಾವುದೋ ನನಗೆ ಎಟುಕದ ಏಣಿ ಅಂದುಕೊಂಡು ಹೊರಟುಹೋದಳು. ಸೋಮು ಬಸ್ ಸ್ಟಾಂಡಿಗೆ ಬಂದು ನಿಂತ. ಅಲ್ಲಿ ಮೂರು ಬಸ್ಸು ನಿಂತಿದ್ದವು. ಸೋಮುಗೆ

ಪರಿಚಯ ಇದ್ದ ಟಿ.ಸಿ. ಯಾವ ಕಡೆ ಸರ್ ಅಂತ ಕೇಳಿದರು. ಸೋಮು ಸುಡುಗಾಡಿಗೆ ಅಂದ. ಟಿ.ಸಿ. ನಗುತ್ತಾ ಅಲ್ಲಿಗೆ ಇಲ್ಲಿಂದ ಯಾವುದೂ ಬಸ್ ಹೋಗಲ್ಲ. ನೀವು ಮುನಿಸಿಪಾಲಿಟಿ ಕಛೇರಿಗೆ ಹೋದರೆ ಅವರೇ ಕಳಿಸಿಕೊಡುತ್ತಾರೆ, ಕಸದ ಗಾಡೀಲಿ ಅಂದರು. ಸೋಮು ಟಿ.ಸಿ. ಬಳಿ ಹೋಗಿ ಒಂದು ಪರ್ಸನಲ್ ಕ್ವಶ್ಚನ್ನು, ನಿಮ್ಮ ಹೆಂಡತಿ ನಿಮಗೆ ಕಾಟ ಕೊಟ್ಟರೆ, ನಿಮಗೆ ಅವರ ಮೇಲೆ ಸಿಟ್ಟು ಬಂದರೆ ಏನು ಮಾಡ್ತೀರ ಅಂತ ಕೇಳಿದ. ಅದಕ್ಕೆ ಟಿ.ಸಿ. ಅವರು ನಗುತ್ತಾ ನೀವು ಮಾಡಿದ ಹಾಗೇ ಒಂದು ಬ್ಯಾಗ್ ಹಿಡಿದು ಬಸ್ ಸ್ಟಾಂಡಿಗೆ ಬರ್ತೀನಿ. ಸ್ವಲ್ಪ ಹೊತ್ತು ನಿಂತಿರ್ತೀನಿ. ನಂತರ ಒಂದು ಕಪ್ ಬಿಸಿ ಬಿಸಿ ಕಾಫಿ ಕುಡೀತೀನಿ. ನಂತರ ಹೂವಾಡಗಿತ್ತಿ ಹತ್ತಿರ ಹೋಗಿ ಒಂದು ಮಾರು ಮಲ್ಲಿಗೆ ಹೂವು ತಗೊಂಡು ಮನೆಗೆ ಹೋಗ್ತೀನಿ ಅಂದರು. ಸೋಮು ಅಚ್ಚರಿಯಿಂದ ಅದ್ಯಾಕೆ ಅಂತ ಕೇಳಿದ. ನನಗೆ ಬಂದಿರೋ ಕೋಪನ ಕಡಿಮೆ ಮಾಡಿಕೊಂಡು ಅವಳ ಕೋಪ ಕಡಿಮೆ ಮಾಡಲು ಮಲ್ಲಿಗೆ ಹೂವು ತಗೊಂಡು ಹೋಗ್ತೀನಿ ಅಂದರು. ಹಾಗಾದರೆ ನಿಮ್ಮ ಹೆಂಡತಿ ನಿಮ್ಮ ಕೋಪ ಕಡಿಮೆ ಮಾಡಲು ಏನು ಮಾಡಿರ್ತಾರೆ ಅಂತ ಸೋಮು ಕೇಳಿದ. ಅವಳು ನನಗಿಷ್ಟವಾದ ಸಿಹಿ ತಿಂಡಿ ಮಾಡಿಕೊಂಡು ನಾನು ಹಿಂದಿರುಗುವುದನ್ನೇ ಕಾಯ್ತಿರ್ತಾಳೆ ಅಂದರು. ಸೋಮು ಹಾಗಾದರೆ ನಾನೂ ಈಗ ಒಂದು ಮಾರು ಮಲ್ಲಿಗೆ ಹೂವು ತಗೊಂಡು ಹೋಗ್ಲಾ ಅಂತ ಕೇಳಿದ. ಹಾಗೇ ಮಾಡಿ ಅಂದರು. ಸೋಮುಗೆ ಮತ್ತೆ ಅನುಮಾನ. ನಾನು ಹೂವು ತಗೊಂಡು ಹೋದರೆ ಸೋಮಿ ನನಗಿಷ್ಟವಾದ ಶಾವಿಗೆ ಪಾಯಸ ಮಾಡಿರ್ತಾಳಾ ಅಂತ ಕೇಳಿದ. ಈಗ ಹೂವು ತಗೊಂಡು ಹೋಗಿ, ಮುಂದೇನಾಯ್ತು ಅಂತ ನಾಳೆ ಹೇಳಿ ಅಂದರು. ಸೋಮು ಮಲ್ಲಿಗೆ ಹೂವಿನ ಸಮೇತ ಮನೆ ಹತ್ತಿರ ಬಂದಾಗಲೇ ಶಾವಿಗೆ ಪಾಯಸದ ವಾಸನೆ ಬಂತು. ಹಾಗೇ ಮಲ್ಲಿಗೆ ಹೂವಿನ ವಾಸನೆ ಗಮನಿಸಿದ ಸೋಮಿ ಮಂದಹಾಸದ ಮುಖ ಮಾಡಿಕೊಂಡು ಬಂದು ಬಾಗಿಲು ತೆಗೆದಳು. ಅಲ್ಲಿಗೆ ಸೋಮು ಸೋಮಿ ನಡುವಿನ ಉಂಡು ಮಲಗುವ ತನಕ ಎನ್ನುವ ಅವರ ಜಗಳ ಮುಕ್ತಾಯವಾಯಿತು.

# ಯಕ್ಷಗಾನದ ರಣವೀಳ್ಯ

● ಅನಿತಾ ನರೇಶ್ ಮಂಚಿ

**ನೀವು ಹೇಳಿಕೊಡುವುದಾದರೆ ನಾವು ವೇಷ ಕಟ್ಟಿ ಕುಣಿಯುವುದಕ್ಕೆ ಸೈ**

ಯಕ್ಷಗಾನದ ಚೆಂಡೆ ಮೈಲು ದೂರದಲ್ಲಿ ಕೇಳಿದರೂ ಕಿವಿ ನೆಟ್ಟಗಾಗಿಸಿ ಅತ್ತ ಕಡೆಗೆ ಕಾಲು ಹಾಕುತ್ತಿದ್ದವರು ನನ್ನಪ್ಪ. ಕೊಡಗಿಗೆ ಬಂದ ಮೇಲೆ ಅಪ್ಪನ ಯಕ್ಷಗಾನದ ಆಸಕ್ತಿಯ ಬಳ್ಳಿಗೆ ನೀರು ಸಿಕ್ಕುತ್ತಿದ್ದುದು ಅಷ್ಟರಲ್ಲೇ ಇತ್ತು. ಈ 'ಮಳೆ'ನಾಡಿಗೆ ಯಾವ ಮೇಳಗಳೂ ಬಂದು ಟೆಂಟ್ ಹಾಕಿ ಆಟ ಆಡಿ ದುಡ್ಡು ಮಾಡುವುದು ಸಾಧ್ಯವೂ ಇರುತ್ತಿರಲಿಲ್ಲ ಎಂದ ಮೇಲೆ ಘಟ್ಟ ಹತ್ತಿ ಬರುವ ತೊಂದರೆಯನ್ನು ಅವರೂ ತೆಗೆದುಕೊಳ್ಳುತ್ತಿರಲಿಲ್ಲ. ಅಪ್ಪ ಆಗೊಮ್ಮೆ ಈಗೊಮ್ಮೆ ದಕ್ಷಿಣ ಕನ್ನಡದ ಕಡೆ ಹೋದರೆ ರಾತ್ರಿ ಇಡೀ ನಿದ್ದೆಗೆಟ್ಟು ಆಟ ನೋಡಿ ಕೆಂಗಣ್ಣಿಗನಾಗಿ ಬರುತ್ತಿದ್ದರು.

ಹೀಗೆ ಅಪರೂಪಕ್ಕೊಮ್ಮೆ ಆಟ ನೋಡಿ ಬರುತ್ತಿದ್ದ ಅಪ್ಪ ಬಹು ದಿನಗಳವರೆಗೆ ಅದರ ಗುಣಗಾನದಲ್ಲಿ ತೊಡಗಿರುತ್ತಿದ್ದರು. ಭಾಗವತರ ಕಂಠಸಿರಿ, ಹಿಮ್ಮೇಳದವರ ನೈಪುಣ್ಯತೆ, ಅರ್ಥದಾರಿಗಳ ಪಾಂಡಿತ್ಯ ಇತ್ಯಾದಿಗಳನ್ನು ಹೊಗಳಿ ವೈಭವೀಕರಿಸುವುದೆಂದರೆ ಅವರಿಗೆ ಎಲ್ಲಿಲ್ಲದ ಆಸಕ್ತಿ. ಔಷಧಕ್ಕಾಗಿ ಬಂದ ಪೇಷಂಟುಗಳಿಗೂ ಈ ಹೊಗಳಿಕೆಯ ಗುಟುಕನ್ನು ಕುಡಿಸುತ್ತಿದ್ದರು. ಅವರಿಗೂ ಇದನ್ನು ಸ್ವೀಕರಿಸುವುದು ಅನಿವಾರ್ಯವಾಗಿತ್ತು.

ಹೀಗೆ ಮೇಲಿಂದ ಮೇಲೆ ಅಪ್ಪನ ದೆಸೆಯಿಂದ ಯಕ್ಷಗಾನವನ್ನು ಗುಟುಕಾಯಿಸಿದ ಪರಿಣಾಮವೋ ಏನೋ, ನಮ್ಮೂರ ಜನರಿಗೂ ಉತ್ಸಾಹ ಉಕ್ಕಿ ಬಂತು. ಮೊದ ಮೊದಲು ಅಪ್ಪನ ಯಕ್ಷಗಾನದ ಹರಟೆಗೆ ಸುಮ್ಮಗೆ ಹೂಗುಟ್ಟುತ್ತಿದ್ದವರು ಕ್ರಮೇಣ, ಗಂಡು ಕಲೆಯೆನಿಸಿಕೊಂಡ ಯಕ್ಷಗಾನ ನಮಗೇನು ದೂರದ್ದೇ ಸ್ವಾಮೀ ? ನಮ್ಮ ಪಕ್ಕದ ಊರು ಕರಾವಳಿಯದ್ದಲ್ಲವೇ.. ನಾವೂ ಒಂದು ಆಟ ಆಡೇ ಬಿಡೋಣ ಅನ್ನತೊಡಗಿದರು.

ಹೇಳಿ ಕೇಳಿ ಟಿಪ್ಪುಸುಲ್ತಾನನ ಸೈನ್ಯವನ್ನೇ ಹಿಮ್ಮೆಟ್ಟಿಸಿದ ಖ್ಯಾತಿಯ ಪರಂಪರೆಯವರಿವರು, ಮನೆಗೊಬ್ಬ ಯೋಧನಂತೆ ಗಡಿಯಲ್ಲಿ ದೇಶ ಕಾಯುವ ಕೊಡಗಿನ ಕಲಿಗಳು. ಇವರಿಗೆ ಬಯಲಾಟದ ಯುದ್ಧಗಳು ತೀರ ಸಾಧಾರಣವಾಗಿ ಕಂಡದ್ದರಲ್ಲಿ ಆಶ್ಚರ್ಯವೇನಿದೆ? ಸ್ವಾಮಿ , ನೀವು ಹೇಳಿ ಕೊಡುವುದಾದರೆ ನಾವು ವೇಷ ಕುಟ್ಟಿ ಕುಣಿಯುವುದಕ್ಕೆ ಸೈ ಎಂದು ಪಂಥಾಹ್ವಾನವನ್ನು ನೀಡಿಯೇ ಬಿಟ್ಟರು.

ಯಕ್ಷಗಾನದ ಊರಲ್ಲಿ ಹುಟ್ಟಿ ಬೆಳೆದು ಸದಾ ಯಕ್ಷಗಾನದ ಗುಂಗಿನಲ್ಲೇ ಇರುತ್ತಿದ್ದ ಅಪ್ಪನಿಗೆ ಇದನ್ನು ಕೇಳಿ ಎಲ್ಲಿಲ್ಲದ ಉಮೇದು ಬಂದು ಬಿಟ್ಟಿತು. ಆದರೆ ಅಪ್ಪನಿಗೆ ಯಕ್ಷಗಾನ ತರಬೇತಿಗೆ ಸಂಬಂಧಿಸಿದಂತೆ ಶಾಲಾದಿನಗಳಲ್ಲಿ ಊರ ಕಲಾವಿದರೊಂದಿಗೆ ಬಣ್ಣ ಹಚ್ಚಿ ಕುಣಿದ ಅನುಭವ ಬಿಟ್ಟರೆ ಬೇರೆ ಅನುಭವ ಇರಲಿಲ್ಲ. ಆದರೆ ತಾವಾಗಿ ಬಂದು ರಣವೀಳ್ಯ ನೀಡಿದಾಗ ಸುಮ್ಮನೆ ಕೂರುವುದುಂಟೇ.. ನಾನು ಸಿದ್ದ ಎಂದು ಊರ ಜನರು ಕೊಟ್ಟ ರಣವೀಳ್ಯವನ್ನು ಕಚಕಚನೆ ಜಗಿದೇ ಬಿಟ್ಟರು.

ಕಲಿಯುವುದು ಕಲಿಸುವುದು ಎಲ್ಲ ಸರಿ.. ಆದರೆ ಆಟಕ್ಕೊಂದು ಪ್ರಸಂಗ ಬೇಡವೆ? ಇದನ್ನು ನಿರ್ಧರಿಸಲು ರಾಮ ಮಂದಿರದಲ್ಲಿ ಕಲಾಪ್ರೇಮಿಗಳ ಮೀಟಿಂಗ್ ಕರೆಯಲಾಯಿತು. ಗಧಾಯುದ್ದ, ರಾಮಾಶ್ವಮೇಧದಂತಹಾ ಪ್ರಸಂಗಗಳು ಒಂದಿಲ್ಲೊಂದು ಕಾರಣದಿಂದ ತಳ್ಳಿಹಾಕಲ್ಪಟ್ಟವು. ನಡುವೆ ಹೋಟೇಲ್ ವೆಂಕಟ ಸರಬರಾಜು ಮಾಡಿದ ಗೋಳಿ ಬಜೆ ಪ್ಲೇಟುಗಟ್ಟಲೆ ಖಾಲಿಯಾದವು. ಕಾಫಿಯ ಹಂಡೆ ಕ್ಷಣಾರ್ಧದಲ್ಲಿ ತಳ ಕಂಡಿತು. ಅಂತೂ ಪ್ರಸಂಗ ಯಾವುದೆಂದು ನಿರ್ಧಾರವಾಗದೇ ಎರಡನೇ ಮೀಟಿಂಗಿಗೆ ದಿನ ನಿಗದಿಪಡಿಸಿ ಮೀಟಿಂಗ್ ಬರಖಾಸುತಿ ಮಾಡಲಾತು.

ಎರಡನೇ ಮೀಟಿಂಗ್ ಕೂಡ ಇದೇ ದಾರಿ ಹಿಡಿದರೆ ಕಷ್ಟ ಎಂಬ ಮುನ್ನೆಚ್ಚರಿಕೆಯಿಂದ ಅಪ್ಪ 'ಶ್ವೇತಕುಮಾರ ಚರಿತ್ರೆ' ಎಂಬ ನವರಸ ಭರಿತ ಪ್ರಸಂಗವೊಂದನ್ನು ಆರಿಸಿಕೊಂಡು ಸಭಾ ಪ್ರವೇಶ ಮಾಡಿದ್ದರು. ಮೊದಲನೇ ಮೀಟಿಂಗ್ ಬಾಬುತಿ ಇರಿಸಿದ್ದ ಕಾಫಿ ತಿಂಡಿಯ ಬಿಲ್ಲನ್ನು ಯಾವ ವೀರನೂ ಎತ್ತಿ ಹೆದೆಗೇರಿಸದೇ ಇದ್ದದ್ದರಿಂದ ಬರಿಗೈಯ್ಯಲ್ಲೇ ಬಂದಿದ್ದ ಹೊಟೆಲ್ ವೆಂಕಟ ಹೀರೋ ಪಾತ್ರ ತನಗೇ ಬೇಕೆಂದು ಪಟ್ಟು ಹಿಡಿದ. ಅವನ ಭರ್ತಿ ದೇಹ ನೋಡಿ ಅಪ್ಪ ಕಥಾ ಸಾರಾಂಶವನ್ನು ಹೇಳಿ ಈ ಕಥೆಯಲ್ಲಿ ಹೀರೋ, ರಕ್ತ ಮಾಂಸಗಳಿಲ್ಲದ ಪ್ರೇತ ಎಂದಾಗ ಆತ ಸ್ವಲ್ಪ ನಡುಗುತ್ತಲೇ ಆದಾದ್ರೆ ನಂಗೆ ಬೇಡ ಎಂದು ದೂರ ಸರಿದ.

ಕಲಿಸುವ ಗುರುವಾದ ಕಾರಣ ಅಪ್ಪನೇ ಪಾತ್ರಗಳನ್ನು ಒಬ್ಬೊಬ್ಬರಿಗೂ ಹಂಚಿದರು. ಮಿಲಿಟ್ರಿಯ ರಜೆಯಲ್ಲಿ ಮನೆಗೆ ಬಂದಿದ್ದ ಬೋಪಯ್ಯ ಯಮನಾದರೆ, ವೆಂಕಟ ರಕ್ಕಸನಾದ. ತನಗೆ ಒಗೆಯಲು ಕೊಡುವ ಯಾವುದಾದರು ಒಳ್ಳೆ ಸೀರೆಯನ್ನು ಆ ದಿನದ ಮಟ್ಟಿಗೆ ತಾನೇ ಹೊಂದಿಸುತ್ತೇನೆ ಎಂದು ಸಾರಿದ ಡೋಬಿ ರಾಜ ರಂಬೆಯಾದ. ಮೇಕಪ್ ಇಲ್ಲದಿದ್ದರೂ,ಯಾವತೂತಿ ಪ್ರೇತ ಕಳೆಯಿಂದ ನಳ ನಳಿಸುತ್ತಿರುವ ರಾಜನ ತಮ್ಮ ಲಾಲು ಪ್ರೇತವಾದ. ಶೋಕಿಲಾಲನಾಗಿದ್ದ ಟೈಲರ್ ವೀರು ಶ್ವೇತಕುಮಾರನಾದರೆ, ಕಳೆದ ವರ್ಷವಷ್ಟೇ ಹೆಂಡತಿಗೆ ಸೋಡಾ ಚೀಟಿ ಕೊಟ್ಟು ತೌರುಮನೆಗೆ ಸೇರಿಸಿದ್ದ ಕಾಳಯ್ಯ ಶ್ವೇತಕುಮಾರನ ಸಾದ್ವೀಮಣಿ ಹೆಂಡತಿಯಾದ. ಮದುವೆಗಳಿಗೆ ಮಂಟಪ ಕಟ್ಟಿ ಅಲಂಕರಿಸುವ ಶಿವ ತನಗೆ ಸಿಕ್ಕಿದ ಪರಶಿವನ ಪಾತ್ರಕ್ಕೆ ಬದಲಾಗಿ ಉಳಿದವರಿಗೆಲ್ಲ ಬಣ್ಣದ ಕಾಗದ ಮತ್ತು ರಟ್ಟಿನಿಂದ ಕಿರೀಟ, ಬೇಗಡೆ ಕಾಗದದಿಂದ ಚಿನ್ನಾಭರಣಗಳನ್ನು ಮಾಡುವ ಕೆಲಸದ ಗುತ್ತಿಗೆಯನ್ನೂ ಹಿಡಿದ.

ಉಳಿದೆಲ್ಲಾ ಪಾತ್ರಗಳು ಅವರವರ ಗಾತ್ರಕ್ಕೂ ಮತ್ತು ಆಟದ ದಿನದಂದು ಅವರು ಹೊಂದಿಸುತ್ತೇವೆಂದು ಒಪ್ಪಿಕೊಂಡ ಸಾಮಾಗ್ರಿಗಳ ಮೇಲೆ ನಿರ್ಧಾರಿತವಾಗಿ ಹಂಚಲ್ಪಟ್ಟಿತು. ಯಾಕೆಂದರೆ ವೇಷ ಭೂಷಣಗಳಿಗೆ ಖರ್ಚು ಮಾಡುವಷ್ಟು ಫಂಡ್ ಯಾರ ಕಿಸೆಯಲ್ಲೂ ಇರಲಿಲ್ಲ.

ಹೇಗೂ ಮುಮ್ಮೇಳ ಸಿದ್ಧವಾಯಿತು. ಆದರೆ ಆಟದ ದಿನ ಹಿಮ್ಮೇಳಕ್ಕೆ ವ್ಯವಸ್ಥೆಯೇನೆಂಬುದು ಮೊದಲೇ ನಿರ್ಧಾರವಾಗಬೇಕಿತ್ತು. ಭಾಗವತಿಕೆಗೆ ಅಪ್ಪನೇ ಉತ್ಸುಕತೆಂದಿದ್ದರು. ದೇವಸ್ಥಾನದಲ್ಲಿ ಚೆಂಡೆ ಹೊಡೆಯುತ್ತಿದ್ದ ಮೋಹನನನ್ನು ಆ ದಿನಕ್ಕೆ ಚೆಂಡೆ ಮತ್ತು ಬಾರ್ಬರ್ ಪುಟ್ಟಪ್ಪನನ್ನು ಮದ್ದಳೆಗೆ ಒಪ್ಪಿಸಿದ್ದಾಯ್ತು. ಹಾರ್ಮೋನಿಯಮ್ ಹಿಡಿದು, ಹಾಡುತ್ತಾ, ಬೇಡುತ್ತಾ, ಅಲೆಯುತ್ತಿದ್ದ ದಾಸಜ್ಜನನ್ನು ಹಾರ್ಮೋನಿಯಮ್ ಶೃತಿ ಕೊಡಲು ಬೇಡಿಕೊಂಡಿದ್ದಾಯಿತು.

ಇನ್ನು ಪ್ರಾಕ್ಟೀಸು ತೊಡಗುವುದೊಂದು ಬಾಕಿ. ಆದರೆ ಅಪ್ಪನಿಗೆ ಇಡೀ ಪ್ರಸಂಗದ ಹಾಡುಗಳು ಬಾಯಿ ಪಾಠ ಇಲ್ಲದ ಕಾರಣ ನಮ್ಮೂರ ಅಪುರೂಪದ ಯಕ್ಷ ಪ್ರೇಮಿಯೊಬ್ಬರನ್ನು ಸಂಪರ್ಕಿಸುವುದು ಅನಿವಾರ್ಯವಾಯಿತು. ಅವರ ಬಳಿ ಯಕ್ಷಗಾನ ಪ್ರಸಂಗ ಪುಸ್ತಕಗಳ ಬಹು ದೊಡ್ಡ ಸಂಗ್ರಹವೇ ಇತ್ತು. ಅದನ್ನು ಅಮೂಲ್ಯ ಆಸ್ತಿಯಂತೆ ಕಾಪಾಡುತ್ತಿದ್ದ ಅವರು ಯಾರಿಗೂ ಪುಸ್ತಕ ಕೊಡುತ್ತಿರಲಿಲ್ಲ. ಹಾಗೇ ಚಿಲ್ಲರೆ ಪಲ್ಲರೆಗಳೆಲ್ಲ ಹೋಗಿ ಕೇಳಿದರೆ ಅವರು ಕೊಡುವರೇ..? ಅಪ್ಪನೇ ಸ್ವತಃ ಒಂದೆರದು ಹಿಂಬಾಲ(ಕ) ರನ್ನು ಇಟ್ಟುಕೊಂಡು ಅವರಲ್ಲಿಗೆ ಹೋಗಿ ಪ್ರಸ್ತಾಪವಿಟ್ಟರು.

ಅಪ್ಪನೊಂದಿಗೆ ಕೆಲವೊಮ್ಮೆ ಅಪ್ಪನ ಖರ್ಚಿನಲ್ಲೇ ಆಟ ನೋಡಿದ ಋಣಭಾರ ಅವರ ಮೇಲಿದ್ದುದರಿಂದ ತಮ್ಮ ಪುಸ್ತಕ ಸಂಗ್ರಹದ ಕಷ್ಟ ನಷ್ಟಗಳನ್ನು ನೂರ ಒಂದು ಬಾರಿ ಹೇಳಿ, ತಮ್ಮ ಪುಸ್ತಕದ ದೂಳು ಕೂಡಾ ಅಲುಗದಂತೆ ಜಾಗ್ರತೆಯಾಗಿ ತಂದು ಕೊಡಬೇಕೆಂದು ಒತ್ತಿ ಒತ್ತಿ ಹೇಳಿ, ಮದುವೆಯಾದ ಮೊದಲ ವಾರದಲ್ಲೇ ಹೆಂಡತಿಯನ್ನು ತೌರು ಮನೆಗೆ ಕಳುಹಿಸುವ ಗಂಡನೋಪಾದಿಯಲ್ಲಿ ಪುಸ್ತಕವನ್ನು ಅಪ್ಪನ ಕೈಗೆ ಹಸ್ತಾಂತರಿಸಿದರು.

ಅಪ್ಪ ಅವರು ಹೇಳಿದ್ದಕ್ಕೆಲ್ಲ ತಲೆ ಅಲುಗಿಸಿ ಹೊತ್ತಗೆಯನ್ನು ಹೊತ್ತು ಹೊರ ಬರುತ್ತಿರುವಾಗ ಅವರು ಪುನಃ ಬಂದು ಅಡ್ಡ ನಿಂತು, ನನಗೂ ಒಂದು ಪಾತ್ರ ಕೊಡಿ ಎನ್ನಬೇಕೆ ! ನಡೆಯಲು ಇನ್ನೊಬ್ಬರ ಸಹಾಯ ಬೇಕಿದ್ದ ಈ ಇಳಿವಯಸ್ಸಿನಲ್ಲಿ ಅವರಿಗೆ ಯಾವ ಪಾತ್ರ ಕೊಡುವುದಪ್ಪಾ ಎಂದು ಚಿಂತಿಸುವಾಗ ಅಪ್ಪನಿಗೆ ಪಕ್ಕನೇ ದ್ವಾರ ಪಾಲಕನ ಪಾತ್ರ ಹೊಳೆತು. ಅದಾದರೆ ಊರುಗೋಲಿನ ಸಹಾಯದಿಂದ ರಂಗಸ್ಥಳಕ್ಕೆ ಒಂದು ಸುತ್ತಾದರೂ ಬರಬಹುದು ಎಂಬ ಆಲೋಚನೆ ಅಪ್ಪನದ್ದು. ಅದನ್ನೇ ಸೂಚಿಸಿದಾಗ, ಯಕ್ಷ ಪ್ರೇಮಿ ಆದೀತಪ್ಪ.. ಆಗದೇ ಏನು? ಎಲ್ಲಿ ನೋಡುವ ಎಷ್ಟು ಪದ್ಯ ಇದೆ ಆ ಪಾತ್ರಕ್ಕೆ ಅನ್ನುತ್ತಾ ಪುಸ್ತಕದತ್ತ ಕೈ ಚಾಚಿದರು. ಅಪ್ಪ ನಾಜೂಕಾಗಿ, ನಿಮಗೇನು ಅರ್ಥ ಹೇಳಲು ಈ ಮಕ್ಕಳಂತೆ ಬಾಯಿಪಾಠ ಬೇಕೇ.. ಆ ದಿನ ಸಿದ್ಧವಾಗಿ ಬನ್ನಿ ಸಾಕು ಎಂದು ನುಡಿದು ಹೊರಟೇ ಬಿಟ್ಟರು.

ಅಂತೂ ಇಂತೂ ಯಕ್ಷಗಾನಕ್ಕೆ ಅಗತ್ಯವಿರುವ ಜನಸಂಪತ್ತು, ಪದಾರ್ಥ ಸಂಪತ್ತು ಒಟ್ಟಾದ ಮೇಲೆ ಪ್ರಾಕ್ಟೀಸು ಎಂಬ 'ಸುಂದರ ಕಾಂಡ' ಸುರು ಆಯಿತು.

ಸಂಜೆಯ ವೇಳೆ ನಮ್ಮೂರಿನ ರಾಮಮಂದಿರದ ಹಳೇ ಕಟ್ಟಡ ಇವರ ಕಲಿಕೆಗೆ ಸೂರು ನೀಡಿತು. ಅಪ್ಪ ಜಾಗಟೆ ಹಿಡಿದು ತಾಳ ಕುಟ್ಟುತ್ತಾ ಒಬ್ಬೊಬ್ಬರನ್ನೇ ಕುಣಿಸತೊಡಗಿದರು. ಎಲ್ಲರೂ ಉತ್ಸಾಹದಲ್ಲಿ ಜಿಗಿದು 'ದಿಂಗಣಾ' ತೆಗೆಯುವಾಗ ಜೀರ್ಣಾವಸ್ಥೆಯಲ್ಲಿದ್ದ ಕಟ್ಟಡದ ಗೋಡೆಗಳು ಅದುರುತ್ತಿದ್ದವು. ಅಪಾಯದ ಅರಿವಾಗಿ ಸೌಮ್ಯ ವೇಷಗಳಿಗೆ ಮಾತ್ರ ಒಳ ಪ್ರವೇಶ ನೀಡಿ ಉಳಿದದ್ದನ್ನು ಹೊರಗಿನ ಅಂಗಳದಲ್ಲಿ ಕುಣಿಸಲಾಯಿತು. ತಿಂಗಳುಗಟ್ಲೆ ಅಭ್ಯಾಸ ಮುಂದುವರೆಯಿತು. ಊರಿನ ಜನರೆಲ್ಲಾ ಬೇಗ ಕೆಲಸ ಮುಗಿಸಿ ಸಂಜೆ ಹೊತ್ತು ರಾಮ ಮಂದಿರದಲ್ಲಿ ಇವರನ್ನು ವೀಕ್ಷಿಸಲು ಜಮಾಯಿಸುತ್ತಿದ್ದರು.

ಎಲ್ಲರೂ ಎಷ್ಟು ಮಗ್ನರಾದರು ಎಂದರೆ ಯಕ್ಷಗಾನ ನಿತ್ಯ ಜೀವನದಲ್ಲೂ ನುಗ್ಗಿಬಿಟ್ಟಿತ್ತು. ಹೋಟೆಲ್ ವೆಂಕಟನಲ್ಲಿಗೆ ಹೋಗಿ ಕುಳಿತರೆ ಸಾಕು, ವೆಂಕಟ ಹೋಟೆಲ್ ಮಾಣಿಯನ್ನು ಕೂಗಿ ನೀರು ತಾ.. ಥಾ ತೈಯಥ ದಿನಥಾ.. ಬೇಗ ತಾ.. ಇಲ್ಲಿ ತಾ.. ಎಂದು ಹೇಳುತ್ತಿದ್ದ. ಮಾಣಿಯೂ 'ತಿತಿತಿಥೈ ತಿತಿತಿಥೈ' ಎಂದು ನಾಟ್ಯದ ಹೆಜ್ಜೆ ಹಾಕುತ್ತಾ ಬಂದು ನೀರನ್ನು ಟೇಬಲ್ ಮೇಲೆ ಇಡುತ್ತಿದ್ದ. ಡೋಬಿ ಲಾಲು ಮತ್ತು ರಾಜು ಬಟ್ಟೆ ಒಗೆಯುವಾಗ

ಬಟ್ಟೆಗಳನ್ನು ತಾಳಕ್ಕೆ ಸರಿಯಾಗಿಯೇ ಕಲ್ಲಿಗೆ ಕುಕ್ಕಿ ಕುಕ್ಕಿ ಒಗೆಯುತ್ತಿದ್ದರು. ಟೈಲರ್ ವೀರುವಿನ ಕಾಲುಗಳು ಮಿಷನನ್ನು ಲಯಬದ್ಧವಾಗಿಯೇ ತುಳಿಯಲು ಪ್ರಾರಂಭಿಸಿ, ಒಂದು ವಾರದಲ್ಲಿ ಕೊಡುತ್ತೇನೆಂದ ಬಟ್ಟೆ ಒಂದು ತಿಂಗಳಾದರೂ ಸಿದ್ಧವಾಗುತ್ತಿರಲಿಲ್ಲ. ಆದರೆ ಊರವರೂ ಕೊಂಚವೂ ಬೇಸರಿಸದೇ ಊರ ಹುಡುಗರ ಈ ಎಲ್ಲಾ ಹುಚ್ಚಾಟಗಳನ್ನು ತಾವು ನೋಡಲಿರುವ ಯಕ್ಷಗಾನಕ್ಕಾಗಿ ಸಹಿಸಿಕೊಂಡರು.

ಪ್ರದರ್ಶನದ ದಿನ ಹತ್ತಿರ ಬರುತ್ತಿದ್ದಂತೆ ರಣೋತ್ಸಾಹ ಎಲ್ಲರಲ್ಲೂ ತುಂಬಿ ತುಳುಕುತ್ತಿದ್ದರೂ, ಡೈಲಾಗ್ 'ಡೆಲಿವರಿ' ಮಾತ್ರ ನಿಜ ಅರ್ಥದ ಹೆರಿಗೆ ನೋವಾಗಿ ಎಲ್ಲರನ್ನೂ ಕಾಡತೊಡಗಿತ್ತು. ಮುಂಜಾಗರೂಕತಾ ಕ್ರಮವಾಗಿ ತಪ್ಪಿ ಹೋದ ಡೈಲಾಗುಗಳನ್ನು ನೆನಪಿಸಿಕೊಡಲು ಪರದೆಯ ಹಿಂದಿನಿಂದ ಸಹಕರಿಸಲೆಂದೇ ಎರಡು ಕಂಠಗಳನ್ನು ಸಿದ್ದಪಡಿಸಲಾಯಿತು.

ಆಟಕ್ಕೆ ಮೂರು ದಿನ ಮುಂಚಿತವಾಗಿ ಅಕ್ಕ ತಂಗಿಯರೇ ಅಣ್ಣ ತಮ್ಮಂದಿರೇ, ಇದೇ ಬರುವ ಶನಿವಾರದಂದು ನಮ್ಮೂರ ದೇವಸ್ಥಾನದ ಮುಂದೆ ಸಜ್ಜುಗೊಳಿಸಿರುವ, ವಿದ್ಯುತ್ ದೀಪಗಳಿಂದ ಅಲಂಕೃತವಾಗಿ ಜಗ ಜಗಿಸುವ ಭವ್ಯ ದಿವ್ಯ ರಂಗುರಂಗಿನ ರಂಗ ಮಂಟಪದಲ್ಲಿ, ಮಣ್ಣಿನ ಮಕ್ಕಳು ಪ್ರದರ್ಶಿಸುವ ಶ್ವೇತಕುಮಾರ ಚರಿತ್ರೆ ಎಂಬ ಅದ್ಭುತ ಪುಣ್ಯ ಕಥಾನಕವನ್ನು ನೋಡಲು ಮರೆಯದಿರಿ, ಮರೆತು ನಿರಾಶರಾಗದಿರಿ ಎಂಬ ಘೋಷವಾಕ್ಯವನ್ನು ಜೀಪಿಗೆ ಮೈಕ್ ಕಟ್ಟಿ ಸಾರಲಾಯಿತು. ಅಂತೂ ಇಂತೂ ಎಲ್ಲರೂ ಕಾಯುತ್ತಿದ್ದ ದಿನ ಬಂದೇ ಬಿಟ್ಟಿತು. ಅಪ್ಪ ಕೆಂಪು ಶಾಲು ಹೊದ್ದು ಹಿಮ್ಮೇಳದೊಂದಿಗೆ ಜಾಗಟೆಯೆತ್ತಿ 'ಗಜಮುಖದವಗೆ ಗಣಪಗೇ' ಎಂದು ಹಾಡಿ ಸುರು ಮಾಡಿಯೇ ಬಿಟ್ಟರು. ಮಿರ ಮಿರನೆ ಮಿನುಗುವ ವಿದ್ಯುದ್ದೀಪಾಲಂಕೃತವಾದ ರಂಗಸ್ಥಳದಲ್ಲಿ ವೇಷಗಳು ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿದವು. ಊರಿನ ಜನಕ್ಕಂತೂ ಆ ವೇಷದೊಳಗಿರುವ ತಮ್ಮ ಮನೆಯ ಜನರನ್ನು ಕಂಡು ಸಂತಸವೋ ಸಂತಸ. ಕೆಲವು ಪಾತ್ರಗಳಂತೂ ಪದ್ಯ ಮುಗಿದರೂ ಕುಣಿಯುವುದನ್ನು ನಿಲ್ಲಿಸದಿದ್ದಾಗ ಅಪ್ಪನೇ ಕೂತಲ್ಲಿಂದ ಇಳಿದು ಬಂದು ಅವರ ರಟ್ಟೆ ಹಿಡಿದು ನಿಲ್ಲಿಸಿ ಅರ್ಥಗಾರಿಕೆ ಸುರು ಮಾಡಲು ಸೂಚಿಸಬೇಕಾಯಿತು.

ರಂಬೆ ಪಾತ್ರದಾರಿ ರಾಜು, ಮಹಿಳಾ ಸಂಘದ ಅಧ್ಯಕ್ಷೆ ಮೀನಾಕ್ಷಮ್ಮನ ಹೊಸ ಸೀರೆಯಲ್ಲಿ ಮಿಂಚುತ್ತಾ ಒಂದು ಸುತ್ತು ನಾಟ್ಯ ಮಾಡಿ ಕಾಲಿಗೆ ಸೀರೆ ತೊಡರಿಸಿಕೊಂಡು ಸ್ಟೇಜಿನಿಂದ ಕೆಳಗೆ ಬಿದ್ದ. ಕೆಳಗಿದ್ದ ಸಭಿಕರು ಅವನನ್ನೆತ್ತಿ ಸ್ಟೇಜಿನ ಮೇಲೆ ಬಿಟ್ಟರು. ಬೀಳುವಾಗ ನಿಲ್ಲಿಸಿದ ಪದ್ಯವನ್ನು ಪುನಃ ಹೇಳಿ ಎಂದು ಭಾಗವತರಾದ ನನ್ನಪ್ಪನಿಗೆ ತಿಳಿಸಿ ಮತ್ತೊಮ್ಮೆ ಕುಣಿದ. ಆಟದ ದಿನ ಸಮೀಪಿಸಿದಾಗ ಯಾರೊಬ್ಬರೂ ಸೀರೆ ಎರವಲು ಕೊಡಲು ಒಪ್ಪದಿದ್ದ ಕಾರಣ ಕಾಳಯ್ಯ ಗುಟ್ಟಿನಲ್ಲಿ ಹೆಂಡತಿಯೊಡನೆ ಸಂಧಾನ ಮಾಡಿಕೊಂಡು ಮರಳಿ ಮನೆಗೆ ಕರೆ ತಂದದ್ದು ಯಾರಿಗೂ ಗೊತ್ತಿರಲಿಲ್ಲ. ಹೆಂಡತಿಯ ರೇಷ್ಮೆ ಸೀರೆಯನ್ನುಟ್ಟು, ಪ್ರೇಕ್ಷಕರ ನಡುವೆ ಕುಳಿತಿದ್ದ ಅವಳನ್ನೇ ನೋಡುತ್ತಾ ವೈಯ್ಯಾರದಿಂದ ಕಾಳಯ್ಯ ಕುಣಿಯುವುದನ್ನು ಕಂಡು ಅವಕ್ಕಾದ ಪ್ರೇಕ್ಷಕರು ಚಪ್ಪಾಳೆ ತಟ್ಟಿ ವಿಷಲ್ ಹಾಕಿ ಸ್ಪಂದಿಸಿದರು. ಅವಳಂತೂ ಮತ್ತೇ ತನ್ನ ಗಂಡನೆಡೆಗೆ ಮರಳಿಸಿದ 'ಆಟ'ವನ್ನು ಆರಾಧನಾ ಭಾವದಲ್ಲಿ ನೋಡುತ್ತಾ ಕುಳಿತ್ತಿದ್ದಳು.

ಅಷ್ಟರಲ್ಲಿ ಸಮಯದೊಂದಿಗೆ ಕಥೆಯೂ ಬೆಳೆದು ಯಮಧರ್ಮರಾಯನೂ ಪ್ರೇತರೂಪದ ಶ್ವೇತ ಕುಮಾರನೂ ಮುಖಾಮುಖಿಯಾಗುವ ಸನ್ನಿವೇಶ ಬಂದೇ ಬಿಟ್ಟಿತು. ಯಮ ಧರ್ಮನ ಪಾತ್ರದಾರಿ ಬೋಪಯ್ಯನಿಗೆ ಗದೆ ಎಂಬ ಆಯುಧ ಸಕಾಲಕ್ಕೆ ಎಲ್ಲೂ ಸಿಗದ

ಕಾರಣ ಕೊಡಗಿನ ಮನೆ ಮನೆಯಲ್ಲೂ ಸರ್ವೇ ಸಾಧಾರಣವಾಗಿದ್ದ ಕೋವಿಯನ್ನೇ ಎತ್ತಿಕೊಂಡು ಸ್ಟೇಜಿಗೆ ಬಂದಿದ್ದ. ದೀಪಗಳನ್ನಾರಿಸಿ ಕತ್ತಲುಂಟು ಮಾಡಿದ್ದ ರಂಗ ಸ್ಥಳಕ್ಕೆ ಪ್ರವೇಶಗೈದ ಪ್ರೇತ ವೇಷದಾರಿಯ ವಿಕಾರ ರೂಪಿನಿಂದ ಭಯಗೊಂಡ ಪುಟ್ಟ ಮಕ್ಕಳ ಚಡ್ಡಿಗಳೂ ಒದ್ದೆಯಾದವು. ಕೆಲವು ಹಿರಿ ತಲೆಗಳು ಕಣ್ಣು ಮುಚ್ಚಿಕೊಂಡು ಹನುಮ ಜಪ ಪಠಿಸತೊಡಗಿದವು.

ದೃಶ್ಯದಲ್ಲಿ ನೈಜತೆ ಇರಲೆಂದು ಯಮನ ಜೊತೆ ಒಂದು ಕೋಣವನ್ನೂ ಸ್ಟೇಜಿನ ಮೇಲೆ ತರುವುದೆಂದು ಮಾತಾಗಿತ್ತು. ಆದರೆ ಗುಂಡೂ ರಾಯರ ಮನೆಯಲ್ಲಿದ್ದ ಏಕಮೇವ ಕೋಣವು ಎರಡು ದಿನಗಳಿಂದ ಸೊಪ್ಪು ಹುಲ್ಲು ಹಿಂಡಿ ಮುಟ್ಟದೆ ಉಪವಾಸ ಸತ್ಯಾಗ್ರಹ ಮಾಡುತ್ತಿತ್ತು. ಇದರಿಂದಾಗಿ ಸ್ವಲ್ಪ ತಲೆ ಖರ್ಚು ಮಾಡಿದ ಅಪ್ಪನ ಶಿಷ್ಯ ಗಣ ಡೋಬಿ ಲಾಲುವಿನ ಕತ್ತೆಗೆ ಹಳೇ ಕರಿಗಂಬಳಿ ಹೊದಿಸಿ ತಲೆಗೆ ಕೃತಕ ಕೊಂಬು ಕಟ್ಟಿ ಸ್ಟೇಜಿನ ಮೇಲೆ ತಂದಿದ್ದರು. ಯಮ ವೇಷದಾರಿ ಬೋಪಯ್ಯ ಎಷ್ಟೇ ಜಗ್ಗಿದರೂ ಕತ್ತೆ ಮಾತ್ರ ತನಗೆ ಪರಿಚಿತ ವಾಸನೆರುವ ಪ್ರೇತ ವೇಷದಾರಿ ಲಾಲುವಿನ ಹಿಂದೆ ಹೋಗಿ ನಿಲ್ಲುತ್ತಿತ್ತು. ಈ ಅವಾಂತರದಿಂದಾಗಿ ಗೊಳ್ಳನೆ ಕೇಕೆ ಹಾಕಿ ನಗುತ್ತಿದ್ದ ಸಭಿಕರೆದುರು ತಬ್ಬಿಬ್ಬಾಗಿ ನಿಂತಿದ್ದ ಯಮನಿಗೂ, ಪ್ರೇತಕ್ಕೂ ತಮ್ಮ ತಮ್ಮ ಸಂಭಾಷಣೆಗಳು ಮರೆತು ಹೋದವು. ಹೇಗೋ ತೆರೆಯ ಹಿಂದೆ ನಿಂತಿದ್ದ ಕಂಠದಾನಿಗಳು ಎಲ್ಲವನ್ನೂ ಆಡಿ ಸುಧಾರಿಸಿದರು.

ಈ ಗಲಭೆಯಲ್ಲಿ ಕತ್ತೆಯನ್ನು ಯಾರೂ ಗಮನಿಸಿರಲಿಲ್ಲ. ಅಪ್ಪ ತಮ್ಮ ಮುಂದಿರಿಸಿಕೊಂಡಿದ್ದ ಪ್ರಸಂಗ ಪುಸ್ತಕವನ್ನು ಮೇವು ಎಂದುಕೊಂಡು ಒಂದೇ ತುತ್ತಿಗೆ ಬಾಯಿಗೆ ಸೇರಿಸಿಕೊಂಡಿತು. ಕೊನೇ ಗಳಿಗೆಯಲ್ಲಿ ಇದನ್ನು ಕಂಡ ಅಪ್ಪ ಅದರ ತಲೆಗೆ ಜಾಗಟೆಯ ಕೋಲಿನಲ್ಲಿ ಸಿಟ್ಟಿನಿಂದ ಮೊಟಕಿದರು. ಅದು ಬ್ರೇಂ .. ಎಂದರಚುತ್ತಾ ಸ್ಟೇಜಿನಿಂದ ಕೆಳಗೆ ಜಿಗಿದು ಸಭಿಕರ ಸಾಲಿನ ಮಧ್ಯದಲ್ಲಿ ತೂರಿ ಹೊರಗೆ ಓಡಿ ಹೋಯಿತು. ಪುಣ್ಯಕ್ಕೆ ಪ್ರಸಂಗ ಪುಸ್ತಕ ನೀಡಿದ ಯಕ್ಷಪ್ರೇಮಿ ಆ ದಿನ ತಮ್ಮ ಉಲ್ಬಣಗೊಂಡ ಕಾಲು ನೋವಿನಿಂದಾಗಿ ಇತ್ತ ಕಡೆ ತಲೆ ಹಾಕಿರಲಿಲ್ಲ. ಇಲ್ಲದಿದ್ದರೆ ಈ ದೃಶ್ಯವನ್ನು ನೋಡಿದ್ದರೆ ಎದೆಯೊಡೆದುಕೊಳ್ಳುತ್ತಿದ್ದರೇನೋ..!!

ಮತ್ತೆ ಬಂದ ಪಾತ್ರಗಳೆಲ್ಲವೂ ಅಪ್ಪನಿಗೆ ಬರುತ್ತಿದ್ದ ಬೇರೆ ಯಾವುದೋ ಪದ್ಯಗಳಿಗೆ ಕುಣಿದು ಈ ಆಟದ ಡೈಲಾಗ್ ಹೇಳಿದವು. ಅಂತೂ ಇಂತೂ ಬೆಳಗಾದಾಗ ಶ್ರುತಿ ಪೆಟ್ಟಿಗೆ ಹಿಡಿದು ಕುಳಿತಿದ್ದ ದಾಸಜ್ಜ ಕುಳಿತಲ್ಲೇ ನಿದ್ರೆ ಹೋಗಿದ್ದನು. ಅಪ್ಪ ಮುಗಿಸುವುದೋ ಎಂಬರ್ಥದಲ್ಲಿ ಚೆಂಡೆ ಮದ್ದಲೆಯ ವಾರಸುದಾರರತ್ತ ಪ್ರಶ್ನಾರ್ಥಕ ನೋಟ ಬೀರಿದರು. ಸಮ್ಮತಿಪೂರ್ವಕವಾಗಿ ಅವರುಗಳು ತಲೆಯಾಡಿಸಿದರು. ಅಪ್ಪ ಸುಶ್ರಾವ್ಯವಾಗಿ ಕರದೊಳು ಪರಶು ಪಾಶಾಂಕುಶ ಧಾರಿಗೇ... ಹರುಷದಿ ಭಕ್ತರ ಪೊರೆವವಗೇ.. ಎಂದು ಮಂಗಳ ಹಾಡಿದರು. ಜೊತೆಗೆ ಮೋಹನನೂ ಪುಟ್ಟಪ್ಪನೂ ಇನ್ನಿಲ್ಲದಂತೆ ಪ್ರಚಂಡವಾಗಿ ಚೆಂಡೆ ಮದ್ದಲೆ ಬಾರಿಸಿ ಮುಕ್ತಾಯ ಮಾಡಿದರು. ಇದರೊಂದಿಗೆ ನಮ್ಮೂರ ಹಮ್ಮೀರರ ಯಕ್ಷಗಾನದಾಟಕ್ಕೆ ತೆರೆ ಬಿದ್ದಂತಾಯ್ತು.

ಹೀಗೆ ಊರವರನ್ನು ಅನಾಯಾಸವಾಗಿ ನಕ್ಕು ನಲಿಸಿದ ಯಕ್ಷಗಾನ ಮುಗಿದು ತಿಂಗಳುಗಟ್ಟಲೆಯಾದರೂ ಜನ ಅದರ ಬಗ್ಗೆ ಮಾತಾಡುವುದು ಬಿಡಲಿಲ್ಲ. ಮೊದಲು ಸುಮ್ಮನೆ ಹೂಗುಟ್ಟುತ್ತಿದ್ದವರೆಲ್ಲಾ ಈಗ ಯಕ್ಷಗಾನದ ಬಗ್ಗೆ ಭಾಷಣ ಬಿಗಿಯಲು ಸುರು ಮಾಡಿದ ನಂತರ ಅಪ್ಪನೇ ಯಾಕೋ ಸಾಕೆನಿಸಿ ಕ್ಲಿನಿಕ್ನಲ್ಲಿ ಆಟದ ವಿಷಯ ಪ್ರಸ್ತಾಪ ಮಾಡುವುದನ್ನು ಬಿಟ್ಟು ಬಿಟ್ಟರು.